# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಜನವರಿ 27, 2022

ಸಂಪುಟ : 48 ಸಂಚಿಕೆ : 257 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




# ಅಭಿವೃದ್ಧಿ ಚಿತ್ರಣ ಬದಲಿಸುವ ಕಾಮಗಾರಿಗಳು

### ಗಣರಾಜ್ಯೋತ್ಸವದಲ್ಲಿ ಸಚಿವ ಭೈರತಿ ಬಸವರಾಜ

ದಾವಣಗೆರೆ, ಜ. 26 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆಡಳಿತದಲ್ಲಿ ಜಿಲ್ಲೆಯ ಅಭಿವೃದ್ಧಿ ಚಟುವಟಿಕೆಗಳಿಗೆ ವೇಗ ದೊರೆತಿದೆ. ದಶಕಗಳಿಂದ ನೆನೆಗುದಿಯಲ್ಲಿದ್ದ ಯೋಜನೆಗಳಿಗೆ ಚಾಲನೆ ದೊರೆತಿದೆ ಎಂದಿರುವ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ, ಜಿಲ್ಲೆಯ ಅಭಿವೃದ್ಧಿಯ ಚಿತ್ರಣ ಬದಲಿಸುವ ಹಲವು ಕಾಮಗಾರಿಗಳನ್ನು ಕೈಗೊಳ್ಳುತ್ತಿರುವುದಾಗಿ ಹೇಳಿದ್ದಾರೆ.

ಜಿಲ್ಲಾಡಳಿತದ ವತಿಯಿಂದ ಬುಧವಾರ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ 73ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಗಣರಾಜ್ಯೋತ್ಸವದ ಸಂದೇಶ ನೀಡಿ ಮಾತನಾಡುತ್ತಿದ್ದರು.

ಗ್ರಾಮೀಣ ಭಾಗದಲ್ಲಿ ಜನರು ಸ್ವಾವಲಂಬನೆ ಯಿಂದ ಬದುಕಲು ಅವಕಾಶಗಳನ್ನು ಸೃಷ್ಟಿಸಲಾಗುತ್ತಿದೆ. ಕೆರೆಗಳಿಗೆ ನೀರುಣಿಸುವ ಯೋಜನೆಗಳು ತ್ವರಿತಗತಿಯಲ್ಲಿ ಅನುಷ್ಠಾನಗೊಳ್ಳುತ್ತಿದ್ದು, ರೈತರ ಸ್ವಾವಲಂಬಿ ಬದುಕಿನ ಕನಸು ನನಸಾಗುವಂತಾಗಿದೆ. ರಸ್ತೆ, ಸೇತುವೆ, ರೈಲು ಸಂಪರ್ಕ ಮತ್ತಿತರೆ ಕಾಮಗಾರಿಗಳು ಜಿಲ್ಲೆಯ ಅಭಿವೃದ್ಧಿಯ ಚಿತ್ರಣವನ್ನು ಬದಲಿಸಲಿವೆ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕೃಷಿ, ತೋಟಗಾರಿಕೆ, ಆರೋಗ್ಯ, ಸಾಮಾಜಿಕ ಭದ್ರತೆ, ಗ್ರಾಮೀಣಾಭಿವೃದ್ಧಿ, ಸ್ವಚ್ಛ ಭಾರತ, ಸ್ಮಾರ್ಟ್ ಸಿಟಿ ಹಾಗೂ ಪಾಲಿಕೆಗಳ ವಲಯಗಳಲ್ಲಿ ಆಗಿರುವ ಅಭಿವೃದ್ಧಿ ಕೆಲಸಗಳ (3ನೇ ಪುಟಕ್ಕೆ)

### ಸಾಧಕ ಮಕ್ಕಳು, ರೈತ ಮಹಿಳೆಗೆ ಸನ್ಮಾನ

ಅಸಾಧಾರಣ ಸಾಧನೆ ಮಾಡಿದ ಪ್ರತಿಭಾನ್ವಿತ ಮಕ್ಕಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಜಿಲ್ಲಾ ಮಟ್ಟದಲ್ಲಿ ನೀಡಲಾಗುವ ಪ್ರಶಸ್ತಿಗೆ ಆಯ್ಕೆಯಾದ 8 ಮಕ್ಕಳಿಗೆ ಗಣರಾಜ್ಯೋತ್ಸವ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಸಂಗೀತ ಕ್ಷೇತ್ರದಲ್ಲಿ ದಾವಣಗೆರೆಯ ವರುಣ್ ವಿ. ಹಾಗೂ ಜಿ.ಕೆ. ಅನನ್ಯ, ಕ್ರೀಡಾ ಕ್ಷೇತ್ರದಲ್ಲಿ ದಾವಣಗೆರೆ ಡಿಆರ್‌ಎಂ ಕಾಲೇಜಿನ ಎಂ.ಹೆಚ್. ಗಜಚೌಹಾಣ್ ಹಾಗೂ ಎಆರ್‌ಜಿ ಕಾಲೇಜಿನ ವಿದ್ಯಾರ್ಥಿ ಶರೀಫ್ ಲಾಲ್‌ಸಾಬ್ ಯಲಿಗಾರ್, ತಾರ್ಕಿಕ ಸಾಧನೆ ಕ್ಷೇತ್ರದಲ್ಲಿ ಹೊನ್ನಾಳಿ ತಾಲ್ಲೂಕಿನ ಎ.ಟಿ. ಅದ್ವಿಕ ಕಾವ್ಯ ಹಾಗೂ ದಾವಣಗೆರೆಯ ಪೂರ್ವಿಕ ಎಂ.ಎ.. ನಾವೀನ್ಯತೆ ವಿಭಾಗದಲ್ಲಿ ಜಗಳೂರಿನ ವಿಸ್ಮಯ್ ತೇಜಸ್ವಿ ಹಾಗೂ ದಾವಣಗೆರೆಯ ಆಪ್ತಾ ಶೆಟ್ಟಿ ಪುರಸ್ಕಾರ ಪಡೆದಿದ್ದಾರೆ. ರಾಜ್ಯ ಮಟ್ಟದ ಕೃಷಿ ಪ್ರಶಸ್ತಿಯಲ್ಲಿ ತೃತೀಯ ಸ್ಥಾನ ಪಡೆದ ಚನ್ನಗಿರಿ ತಾಲ್ಲೂಕು ತ್ಯಾವಣಗಿ ಗ್ರಾಮದ ಆಶಾರಾಣಿ ಅವರನ್ನು ಸನ್ಮಾನಿಸಲಾಯಿತು.

# 12 ಜಿಲ್ಲೆಗಳಿಗೆ ಗ್ರಾಮ-ಒನ್

## ಮಾರ್ಚ್ ವೇಳೆಗೆ ರಾಜ್ಯದ ಎಲ್ಲಾ ಪಂಚಾಯ್ತಿಗಳಲ್ಲಿ ಸೇವೆ ಆರಂಭ

ಬೆಂಗಳೂರು, ಜ. 26 – ರಾಜ್ಯದ 12 ಜಿಲ್ಲೆಗಳ ಗ್ರಾಮಗಳಿಗೆ ಹಲವಾರು ಇಲಾಖೆಗಳ ಸೇವೆ ನೀಡುವ ಗ್ರಾಮ್ - ಒನ್ ಯೋಜನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದ್ದಾರೆ. ಮಾರ್ಚ್ ಒಳಗೆ ಎಲ್ಲಾ ಜಿಲ್ಲೆಗಳಿಗೆ ಈ ಸೇವೆಗಳನ್ನು ವಿಸ್ತರಿಸಲಾಗುವುದು.

ಈ ಯೋಜನೆಯಿಂದ ಜನರು ತಹಶೀಲ್ದಾರ್ ಕಚೇರಿ ಎದುರು ಸರದಿ ಕಾಯುವುದು ತಪ್ಪಲಿದೆ. ಜಾತಿ ಪ್ರಮಾಣ ಪತ್ರ ಮತ್ತಿತರೆ ಪ್ರಮಾಣ ಪತ್ರಗಳನ್ನು ಗ್ರಾಮ್ - ಒನ್ ಮೂಲಕ ಪಡೆಯಬಹುದು ಎಂದು ಬೊಮ್ಮಾಯಿ ಹೇಳಿದ್ದಾರೆ.

ಮಧ್ಯವರ್ತಿಗಳು ಹಾಗೂ ಭ್ರಷ್ಟಾಚಾರದಿಂದಾಗಿ ಜನರಿಗೆ ಸರಿಯಾದ ಸಮಯದಲ್ಲಿ ಸೇವೆಗಳು ದೊರೆಯುತ್ತಿರಲಿಲ್ಲ. ಈ ಬಗ್ಗೆ ಹಲವಾರು ದೂರುಗಳು ಬಂದ ನಂತರ ಗ್ರಾಮ ಪಂಚಾಯ್ತಿ ಮಟ್ಟದಲ್ಲೇ ಆನ್‌ಲೈನ್ ಮೂಲಕ ಸೇವೆಗಳನ್ನು ಒದಗಿಸಲು ನಾವು ನಿರ್ಧರಿಸಿದ್ದೇವೆ ಎಂದವರು ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿರುವ ಬೊಮ್ಮಾಯಿ, ಗ್ರಾಮ - ಒನ್ ಕೇಂದ್ರಗಳ ಮೂಲಕ ಗ್ರಾಮ ಪಂಚಾಯ್ತಿಗಳನ್ನು ತಹಶೀಲ್ದಾರ್ ಹಾಗೂ ಅಟಲ್ ಸೇವಾ ಕೇಂದ್ರಗಳನ್ನು ಸಂಪರ್ಕಿಸಲಾಗುವುದು. ಬ್ಯಾಂಕಿಂಗ್ ಹಾಗೂ ಆಧಾರ್ ಕಾರ್ಡ್ ಸೇರಿದಂತೆ ಹಲವು ಸೇವೆಗಳು ಜೋಡಣೆಯಾಗಲಿವೆ ಎಂದಿದ್ದಾರೆ.

ಪ್ರಸಕ್ತ ಈ ಕೇಂದ್ರಗಳ ಮೂಲಕ 20-25 ಸೇವೆಗಳನ್ನು ನೀಡಲಾಗುವುದು. ಮುಂದಿನ ದಿನಗಳಲ್ಲಿ 100ರವರೆಗೆ ಸೇವೆಗಳು ಲಭ್ಯವಾಗಲಿವೆ ಎಂದು ಹೇಳಿದ್ದಾರೆ.

ಈ ಹಿಂದೆ ನಾಲ್ಕು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಗ್ರಾಮ ಒನ್ ಆರಂಭಿಸಲಾಗಿತ್ತು. ಇಲ್ಲಿಯವರೆಗೆ ಆರು ಲಕ್ಷ ಜನರು ಯೋಜನೆಯ ಲಾಭ ಪಡೆದುಕೊಂಡಿದ್ದಾರೆ.

ಈಗ 12 ಜಿಲ್ಲೆಗಳ 3,024 ಗ್ರಾಮ ಪಂಚಾಯ್ತಿಗಳಿಗೆ ಗ್ರಾಮ ಒನ್ ಯೋಜನೆ ವಿಸ್ತರಿಸಲಾಗಿದೆ. ಮಾರ್ಚ್ ಅಂತ್ಯದೊಳಗೆ ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿ ಗ್ರಾಮ ಒನ್ ಸೇವೆ ಆರಂಭವಾಗಲಿದೆ. ಈ ಸೇವೆಗಳ ಮೇಲೆ ನಿರಂತರ ನಿಗಾ ವಹಿಸಲಾಗುವುದು. ದಕ್ಷತೆ ಹೆಚ್ಚಿಸಲು ಪ್ರತ್ಯೇಕ ದಳ ರೂಪಿಸಲಾಗುವುದು. ಇ- ಆಡಳಿತ ಇಲಾಖೆ ಯೋಜನೆ ಉಸ್ತುವಾರಿ ವಹಿಸಿಕೊಳ್ಳಲಿದೆ ಎಂದು ಹೇಳಿದರು.

## ಗ್ರಾಮ ಒನ್ ಕೇಂದ್ರದಿಂದ ಗ್ರಾಮೀಣರ ಬದುಕು ಹಸನು



### ಉಸ್ತುವಾರಿ ಸಚಿವ ಬಿ.ಎ.ಬಸವರಾಜ್

ದಾವಣಗೆರೆ, ಜ.26- ಜಿಲ್ಲೆಯಲ್ಲಿ ಈಗಾಗಲೇ 201 ಗ್ರಾಮ ಒನ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 2.70 ಲಕ್ಷ ಅರ್ಜಿಗಳು ವಿಲೇವಾರಿಯಾಗಿ ಸಾರ್ವಜನಿಕರು ಪ್ರಯೋಜನ ಪಡೆದುಕೊಂಡಿದ್ದಾರೆ. ಮತ್ತೆ 60 ಕೇಂದ್ರಗಳನ್ನು ಆರಂಭಿಸಲು ಆದೇಶಿಸಲಾಗಿದೆ. ಇಂತಹ ಒಂದು ಕ್ರಾಂತಿಕಾರಿ ಸೌಲಭ್ಯವನ್ನು ನೀಡಿ ಗ್ರಾಮೀಣರ ಜೀವನ ಹಸನು ಮಾಡಿದುದಕ್ಕಾಗಿ ಮುಖ್ಯಮಂತ್ರಿಗಳನ್ನು ಅಭಿನಂದಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ (2ನೇ ಪುಟಕ್ಕೆ)

**ಮಾಯಕೊಂಡದಲ್ಲಿ ನಡೆದ ಗ್ರಾಮ ಒನ್ ಕೇಂದ್ರಕ್ಕೆ ಮುಖ್ಯಮಂತ್ರಿಯವರು ವರ್ಚ್ಯುಯಲ್ ವೇದಿಕೆ ಮೂಲಕ ಚಾಲನೆ ನೀಡುವ ಕಾರ್ಯಕ್ರಮದ ನೇರ ಪ್ರಸಾರದ ವೇಳೆ ಸರ್ವರ್ ತೊಂದರೆಯಿಂದಾಗಿ ಪದೇ ಪದೇ ಅಡಚಣೆ ಉಂಟಾಗುತ್ತಿದ್ದ ಘಟನೆ ನಡೆಯಿತು. ಜಿಲ್ಲಾ ಉಸ್ತುವಾರಿ ಸಚಿವರು ಸಿಎಂ ಅವರೊಂದಿಗೆ ಮಾತನಾಡುವ ವೇಳೆಗೆ ಮತ್ತೆ ಅಡಚಣೆಯಾಯಿತು. ಈ ವೇಳೆ ಎಸ್ಪಿ ಸಿ.ಬಿ. ರಿಷ್ಯಂತ್ ತಮ್ಮ ಲ್ಯಾಪ್‌ಟಾಪ್ ಮೂಲಕ ಸಚಿವರು ಸಿಎಂ ಅವರೊಂದಿಗೆ ಮಾತನಾಡುವ ವ್ಯವಸ್ಥೆ ಕಲ್ಪಿಸಿಕೊಟ್ಟರು.**

## ಕುರೇಮಾಗಾನಹಳ್ಳಿ ದೇವಿ ಜಾತ್ರೆ, ಮುಂದೂಡಿಕೆ

ಹರಪನಹಳ್ಳಿ, ಜ.26- ತಾಲ್ಲೂಕಿನ ಗಡಿ ಗ್ರಾಮ ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುರೇಮಾಗಾನಹಳ್ಳಿ ಗ್ರಾಮದ ಆರಾಧ್ಯದೈವ, ಶಕ್ತಿಸ್ವರೂಪಿಣಿ ದುರಗಮ್ಮದೇವಿ ಜಾತ್ರೋತ್ಸವವನ್ನು ಕೋವಿಡ್-19 ಸಾಂಕ್ರಾಮಿಕ ರೂಪಾಂತರಿ ಓಮಿಕ್ರಾನ್ ವೈರಸ್ ಹರಡುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು ಸ್ವಯಂಪ್ರೇರಿತರಾಗಿ ಮುಂದೂಡಿದ್ದಾರೆ.

ಪ್ರತಿ ಒಂಬತ್ತು ವರ್ಷಗಳಿಗೆ ಒಮ್ಮೆ ಸಾಂಪ್ರದಾಯಿಕವಾಗಿ, ಅದ್ಧೂರಿಯಾಗಿ ಆಚರಿಸಲ್ಪಡುತ್ತಿದ್ದ ದುರುಗಮ್ಮದೇವಿ ಜಾತ್ರೆ ಈ ಬಾರಿ 2022ರ ಜನವರಿ 25 ರಂದು ವೈಭವೋಪೇತವಾಗಿ ಆಚರಣೆಗೆ ಗ್ರಾಮಸ್ಥರು ಸಕಲ ಸಿದ್ಧತೆ ಮಾಡಿಕೊಂಡಿದ್ದರು. ಇಡೀ (2ನೇ ಪುಟಕ್ಕೆ)

## ಮೀಸಲಾತಿ ಕಲ್ಪಿಸುವಂತೆ ಆದೇಶಿಸಲಾಗದು: ಸುಪ್ರೀಂ

ನವದೆಹಲಿ, ಜ. 25- ಮೀಸಲಾತಿ ಕಲ್ಪಿಸಲು ನ್ಯಾಯಾಲಯಗಳು ಆದೇಶ ಹೊರಡಿಸಲಾಗದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಶೇ.3ರ ಮೀಸಲಾತಿ ಕಲ್ಪಿಸುವಂತೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ತಳ್ಳಿ ಹಾಕಿದೆ.

2019ರಲ್ಲಿ ಆದೇಶವೊಂದನ್ನು ಹೊರಡಿಸಿದ್ದ ಹೈಕೋರ್ಟ್, ಕ್ರೀಡಾ ವಿಭಾಗದಲ್ಲಿ ನೀಡಲಾಗುವ ಮೀಸಲಾತಿಯನ್ನು ಶೇ.1ರಿಂದ ಶೇ.3ಕ್ಕೆ ಹೆಚ್ಚಿಸುವಂತೆ ತಿಳಿಸಿತ್ತು. ತೀರ್ಪು ಪ್ರಶ್ನಿಸಿ ಪಂಜಾಬ್ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು.

## ಕೊವಿಶೀಲ್ಡ್, ಕೊವ್ಯಾಕ್ಸಿನ್ ಬೆಲೆ 275 ರೂ.ಗಳಿಗೆ ನಿಗದಿ

ನವದೆಹಲಿ, ಜ. 26 – ಕೊರೊನಾ ಲಸಿಕೆಗಳಾದ ಕೊವಿಶೀಲ್ಡ್ ಹಾಗೂ ಕೊವ್ಯಾಕ್ಸಿನ್‌ಗಳಿಗೆ ಸಾಮಾನ್ಯ ಅನುಮತಿ ನೀಡಿದ ನಂತರ ಅವುಗಳ ಬೆಲೆಯನ್ನು 275 ರೂ.ಗಳಿಗೆ ನಿಗದಿ ಪಡಿಸಲಾಗುವುದು. ಇದರ ಜೊತೆಗೆ 150 ರೂ.ಗಳ ಹೆಚ್ಚುವರಿ ಸೇವಾ ಶುಲ್ಕ ಇರಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಪ್ರಸಕ್ತ ಖಾಸಗಿ ವಲಯದಲ್ಲಿ ಪ್ರತಿ ಡೋಸ್ ಕೊವ್ಯಾಕ್ಸಿನ್ ಬೆಲೆ 1,200 ಹಾಗೂ ಕೊವಿಶೀಲ್ಡ್ ಬೆಲೆ 780 ರೂ. ಆಗಿದೆ. ಇದರಲ್ಲಿ 150 ರೂ.ಗಳ ಸೇವಾ ಶುಲ್ಕ ಸೇರಿದೆ. ಪ್ರಸಕ್ತ ಲಸಿಕೆಗಳು ತುರ್ತು ಬಳಕೆಗೆ ಮಾತ್ರ ಅನುಮತಿ ಪಡೆದಿವೆ.

## ವಿಧಾನ ಪರಿಷತ್ ವಿಪಕ್ಷ ನಾಯಕರಾಗಿ ಹರಿಪ್ರಸಾದ್



ಬೆಂಗಳೂರು, ಜ. 26 - ವಿಧಾನ ಪರಿಷತ್ ವಿಪಕ್ಷ ನಾಯಕರನ್ನಾಗಿ ಬಿ.ಕೆ ಹರಿಪ್ರಸಾದ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ವಿಧಾನ ಪರಿಷತ್‌ನ ಮುಖ್ಯ ಸಚೇತಕ ಸ್ಥಾನಕ್ಕೆ ಪ್ರಕಾಶ್ ಸಿಂಗ್ ರಾಠೋಡ್ ಅವರನ್ನು ಆಯ್ಕೆ ಮಾಡಲಾಗಿದೆ. ಕೆ. ಗೋವಿಂದ ರಾಜ್ ಅವರನ್ನು ವಿಧಾನ ಪರಿಷತ್‌ನ ಉಪ ನಾಯಕನಾಗಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

# ಗಣರಾಜ್ಯೋತ್ಸವದಲ್ಲಿ ಸೈನಿಕ ಶಕ್ತಿ ಸಾಂಸ್ಕೃತಿಕ ಪರಂಪರೆ ಪ್ರದರ್ಶನ

ನವದೆಹಲಿ, ಜ. 26 – ದೇಶದ 73ನೇ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಕೆಂಪು ಕೋಟೆಯ ಮೇಲೆ ನಡೆದ ಭವ್ಯ ಸಮಾರಂಭದಲ್ಲಿ ಸೈನಿಕ ಶಕ್ತಿ ಪ್ರದರ್ಶನ ಹಾಗೂ ಭವ್ಯ ಸಾಂಸ್ಕೃತಿಕ ಪರಂಪರೆಯ ಪ್ರದರ್ಶನ ನೆರವೇರಿತು. ಕೊರೊನಾ ಹಿನ್ನೆಲೆಯಲ್ಲಿ ಗಣರಾಜ್ಯೋತ್ಸವ ಸಮಾರಂಭವನ್ನು ಸಾಕಷ್ಟು ಸೀಮಿತಗೊಳಿಸಲಾಗಿತ್ತು.

1971ರ ಸಮರದಲ್ಲಿ ಪಾಕಿಸ್ತಾನವನ್ನು ಸೋಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸೆಂಚುರಿಯನ್ ಟ್ಯಾಂಕ್, ಪಿ.ಟಿ. 76 ಟ್ಯಾಂಕ್, 75/24 ಪ್ಯಾಕ್ ಹೊವಿಟ್ಜರ್ ಹಾಗೂ ಒಟಿ62 ಟೊಪಾಜ್ ಸಮರ ವಾಹನಗಳನ್ನು ಪ್ರದರ್ಶಿಸಲಾಯಿತು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ಸಮರ ಸ್ಮಾರಕದಲ್ಲಿ ಹುತಾತ್ಮರಿಗೆ ನಮಿಸುವುದರೊಂದಿಗೆ ಗಣರಾಜ್ಯೋತ್ಸವದ ಕಾರ್ಯಕ್ರಮಗಳು ಆರಂಭವಾದವು. ಈ ಸಂದರ್ಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಮೂರೂ ಸೇನೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಸಾಂಪ್ರದಾಯಿಕ ದಿರಿಸಿನ ಬದಲು ಪ್ರಧಾನಿ ಮೋದಿ, ಈ ವರ್ಷ ಉತ್ತರಾಖಂಡದ (3ನೇ ಪುಟಕ್ಕೆ)

## ರಾಯಣ್ಣ ಸೈನಿಕ ಶಾಲೆಗೆ ಸಕಲ ಸಿದ್ಧತೆ: ಬೊಮ್ಮಾಯಿ

ಬೆಂಗಳೂರು, ಜ. 26- ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣ ಅವರ ಹೆಸರಿನಲ್ಲಿ 180 ಕೋಟಿ ರೂ. ವೆಚ್ಚದಲ್ಲಿ ಸೈನಿಕ ಶಾಲೆ ತೆರೆಯುವ ಸಿದ್ಧತೆಗಳು ಪೂರ್ಣವಾಗಿವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ರಾಯಣ್ಣ ಅವರ 191ನೇ ಸಂಸ್ಮರಣೆ ದಿನದಂದು ಅವರ ಪ್ರತಿಮೆಗೆ ಪುಷ್ಪಾರ್ಚನೆ ನೆರವೇರಿಸಿದ ನಂತರ ಮಾತನಾಡುತ್ತಿದ್ದ ಅವರು, ಸರ್ಕಾರ ಸೈನಿಕ (2ನೇ ಪುಟಕ್ಕೆ)

## ಗುಲಾಂ ನಬಿಗೆ ಪದ್ಮ ಭೂಷಣ ಕಾಂಗ್ರೆಸ್ ಪಕ್ಷದಲ್ಲಿ ಒಡಕು

ನವದೆಹಲಿ, ಜ. 26-ಕಾಂಗ್ರೆಸ್ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಅವರಿಗೆ ಕೇಂದ್ರದ ನರೇಂದ್ರ ಮೋದಿ ಸರ್ಕಾರ ಪದ್ಮ ಭೂಷಣ ಪ್ರಶಸ್ತಿ ನೀಡಿರುವುದು ಕಾಂಗ್ರೆಸ್ ಪಕ್ಷದಲ್ಲಿ ಒಡಕಿನ ನಿಲುವಿಗೆ ಕಾರಣವಾಗಿದೆ.

ಕಾಂಗ್ರೆಸ್ ಪಕ್ಷದಲ್ಲಿ ಆಂತರಿಕ ಸುಧಾರಣೆಯಾಗಬೇಕು ಎಂದು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದ 23 ನಾಯಕರ ಗುಂಪಿನಲ್ಲಿ ಆಜಾದ್ ಪ್ರಮುಖರಾಗಿದ್ದಾರೆ.

ಆಜಾದ್ ಅವರ ಸೇವೆ ಕಾಂಗ್ರೆಸ್ ಪಕ್ಷಕ್ಕೆ ಬೇಕಾಗಿಲ್ಲ, ಆದರೆ ದೇಶ ಅವರ ಕೊಡುಗೆಯನ್ನು (2ನೇ ಪುಟಕ್ಕೆ)

# ಟಿಪ್ಪು, ಕಲಾಂ ಚಿತ್ರ ಇಲ್ಲದ್ದಕ್ಕೆ ಆಕ್ಷೇಪ



### ಸ್ವಾತಂತ್ರ್ಯ ಯೋಧರ ಚಿತ್ರಗಳ ಪ್ರದರ್ಶನ ತೆರವು

### ಘಟನೆಗೆ ವಿಷಾದ ವ್ಯಕ್ತಪಡಿಸಿದ ಹರಿಹರ ತಹಶೀಲ್ದಾರ್

ಹರಿಹರ, ಜ. 26 - ಗಣರಾಜ್ಯೋತ್ಸವದ ನಿಮಿತ್ತ ಆಯೋಜಿಸಲಾಗಿದ್ದ ಸ್ವಾತಂತ್ರ್ಯ ಯೋಧರ ಚಿತ್ರ ಪ್ರದರ್ಶನದಲ್ಲಿ ಮೈಸೂರು ದೊರೆ ಟಿಪ್ಪು ಸುಲ್ತಾನ್ ಹಾಗೂ ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಚಿತ್ರ ಇಲ್ಲ ಎಂಬ ಆಕ್ಷೇಪ ವ್ಯಕ್ತವಾದ ನಂತರ, ಪ್ರದರ್ಶನ ತೆರವುಗೊಳಿಸಿದ ಘಟನೆ ನಡೆದಿದೆ.

ಧನ್ಯೋಸ್ಮಿ ಭರತಭೂಮಿ ಹಾಗೂ ರಾಷ್ಟ್ರಗೌರವ ಸಂರಕ್ಷಣಾ ಪರಿಷತ್ ವತಿಯಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಿವೃತ್ತ ಚಿತ್ರಕಲಾ ಶಿಕ್ಷಕ ಡಾ. ಜಿ.ಜೆ. ಮೆಹೆಂದಳೆ ಅವರು ಖಾದಿ ಬಟ್ಟೆ ಮೇಲೆ ರಚಿಸಿದ ಕೃತಿಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ಹರಿಹರದ ಮಿನಿ ವಿಧಾನಸೌಧ, ಪೊಲೀಸ್ ವೃತ್ತ ಕಚೇರಿ ಹಾಗೂ ಧೂಳೆಹೊಳೆ ಪ್ರಾಥಮಿಕ ಶಾಲೆಗಳಲ್ಲಿ ಏಕಕಾಲಕ್ಕೆ ಪ್ರದರ್ಶನ ಆಯೋಜಿಸಲಾಗಿತ್ತು.

ಮಿನಿ ವಿಧಾನಸೌಧದ ಮುಂಭಾಗ ಪ್ರದರ್ಶನ ನಡೆಯುವ ವೇಳೆ ಬಂದ ಪಾಲಿಕೆ ಸದಸ್ಯರಾದ ಮುಜಾಮಿಲ್ ಬಿಲ್ಲು, ದಾದಾ ಖಲಂದರ್ ಹಾಗೂ ಮುಖಂಡರಾದ ಮನ್ಸೂರ್ ಮದ್ದಿ ಅವರು ಪ್ರದರ್ಶನದಲ್ಲಿ ಟಿಪ್ಪು ಸುಲ್ತಾನ್ ಮತ್ತು ಕಲಾಂ ಚಿತ್ರಗಳು ಇಲ್ಲ. ಮಹಾತ್ಮ ಗಾಂಧೀಜಿ ಹಾಗೂ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಚಿತ್ರಗಳನ್ನು ಚಿಕ್ಕದಾಗಿ ಕೆಳ ಭಾಗದಲ್ಲಿ ರಚಿಸಲಾಗಿದೆ ಎಂದು ಆಕ್ಷೇಪಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರು ಚಿತ್ರಪ್ರದರ್ಶನ ತೆರವುಗೊಳಿಸಲು ಮುಂದಾದರು. ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ತೆರವುಗೊಳಿಸುವುದು ಸೂಕ್ತವಲ್ಲ ಎಂದು ಆಯೋಜಕರು ಆಕ್ಷೇಪಿಸಿದರು. ಆದರೆ, ಅಹಿತಕರ ಘಟನೆ ಏನಾದರೂ ನಡೆದರೆ ಚಿತ್ರಗಳಿಗೆ ರಕ್ಷಣೆ ನೀಡಲು ವ್ಯವಸ್ಥೆ ಮಾಡಲು ಸಾಧ್ಯವಾಗದು ಎಂದ ತಹಶೀಲ್ದಾರರು, ಪೊಲೀಸರನ್ನು ಕರೆಸಿ ಚಿತ್ರಗಳನ್ನು (2ನೇ ಪುಟಕ್ಕೆ)

# ಅಡ್ಡಿ ತಾತ್ಕಾಲಿಕ, ಅಭಿವೃದ್ಧಿಯೇ ಗುರಿ

## ಜಗಳೂರು: 73ನೇ ಗಣರಾಜ್ಯೋತ್ಸವದಲ್ಲಿ ಎಸ್.ವಿ. ರಾಮಚಂದ್ರ

ಜಗಳೂರು, ಜ.26- ಕ್ಷೇತ್ರದ 57 ಕೆರೆ ತುಂಬಿಸುವ ಯೋಜನೆಗೆ ಕೆಲವರು ಎಷ್ಟೇ ಅಡೆತಡೆ ಉಂಟುಮಾಡಿದರೂ ಸಹ ತರಬಾಳು ಜಗದ್ಗುರು ಶ್ರೀಗಳ ಆಶೀರ್ವಾದದಿಂದ ಎಲ್ಲಾ ವಿಘ್ನಗಳು ನಿವಾರಣೆಯಾಗಿ ಯೋಜನೆಯ ಕಾಮಗಾರಿ ತೀವ್ರಗತಿಯಲ್ಲಿ ನಡೆಯುತ್ತಿದೆ ಎಂದು ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದರು.

ಪಟ್ಟಣದ ಹೃದಯ ಭಾಗದಲ್ಲಿ ಸುಮಾರು ಎರಡೂವರೆ ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಬೃಹತ್ ರಂಗಮಂದಿರದ ವೇದಿಕೆ ಮೇಲೆ ಆಯೋಜಿಸಿದ್ದ 73ನೇ ಕನ್ನಡ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಗತಿಗೆ ಯಾರೇ ಅಡ್ಡಿಪಡಿಸಿದರೂ ಅದು ತಾತ್ಕಾಲಿಕವಾಗಿರುತ್ತದೆ. ನನ್ನ ಗುರಿ ಅಭಿವೃದ್ಧಿ. ನಾನು ಹೇಳುವುದಿಲ್ಲ, ಕೆಲಸ ಮಾಡಿ ತೋರಿಸುತ್ತೇನೆ ಎಂದ ಶಾಸಕರು, ಕೆಲವೇ ದಿನಗಳಲ್ಲಿ ಪ್ರಾಯೋಗಿಕವಾಗಿ ಕೆರೆಗೆ ನೀರು ಹರಿಸಲಾಗುವುದು ಎಂದು ಭರವಸೆ ವ್ಯಕ್ತಪಡಿಸಿದರು.

ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಶಂಕುಸ್ಥಾಪನೆಯು ಇದೇ ತಿಂಗಳಲ್ಲಿ ನೆರವೇರಬೇಕಾಗಿತ್ತು. ಆದರೆ ಮುಖ್ಯಮಂತ್ರಿಗಳ ಅನಾರೋಗ್ಯದ ನಿಮಿತ್ಯ ಸಮಾರಂಭವನ್ನು ಫೆಬ್ರವರಿ ತಿಂಗಳು ನೆರವೇರಿಸಲಾಗುವುದು. ತಜ್ಞರ ವರದಿಯಂತೆ ಮುಂದಿನ ತಿಂಗಳು ಇದೇ ವೇದಿಕೆಯಲ್ಲಿ ಅದ್ಧೂರಿ ಸಮಾರಂಭವನ್ನು ಏರ್ಪಡಿಸಲಾಗುವುದು (3ನೇ ಪುಟಕ್ಕೆ)



### ಎರಡೂವರೆ ಕೋಟಿ ವೆಚ್ಚದ ರಂಗಮಂದಿರ

ರಾಜ್ಯದಲ್ಲಿಯೇ ತಾಲ್ಲೂಕು ಕೇಂದ್ರದಲ್ಲಿ ವಿಶೇಷವಾದ ಸುಮಾರು ಎರಡೂವರೆ ಕೋಟಿ ರೂ. ವೆಚ್ಚದ ರಂಗಮಂದಿರ ಹಾಗೂ ಕನ್ನಡ ಭವನ, ಶಾಸಕರ ಭವನ ಒಂದೇ ಸೂರಿನಡಿ ನಿರ್ಮಿಸಲಾಗುತ್ತಿದ್ದು, ತಾಲ್ಲೂಕು ಕೇಂದ್ರದಲ್ಲಿ ಜಿಲ್ಲಾ ರಂಗಮಂದಿರದಂತೆ ಕಂಗೊಳಿಸುತ್ತಿದೆ. ಇದು ನನ್ನ ಕನಸಿನ ಕಟ್ಟಡವಾಗಿದ್ದು, ಈ ಸುಂದರ ಮತ್ತು ಬೃಹತ್ ರಂಗಮಂದಿರದ ಆವರಣದಲ್ಲಿ ಅಕ್ಟೋಬರ್ ತಿಂಗಳಲ್ಲಿ ಹೊನಲು ಬೆಳಕಿನ ಕಬಡ್ಡಿ ಕ್ರೀಡೆಗಳನ್ನು ಆಯೋಜಿಸಲಾಗುವುದು ಎಂದು ಶಾಸಕರು ತಿಳಿಸಿದರು.

# ಸಂವಿಧಾನ ಮೂಲಮಂತ್ರವಾದಾಗ ಸಮ ಸಮಾಜ ನಿರ್ಮಾಣ ಸಾಧ್ಯ

### ಹರಪನಹಳ್ಳಿಯಲ್ಲಿ ಗಣರಾಜ್ಯೋತ್ಸವ

ಹರಪನಹಳ್ಳಿ, ಜ.26- ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ಈ ಮೂರು ಮೂಲ ಮಂತ್ರಗಳ ಸೈದ್ಧಾಂತಿಕ ತಳಹದಿಯ ಮೇಲೆ ಸಮ ಸಮಾಜ ಕಟ್ಟಬಹುದು ಎಂದು ಉಪವಿಭಾಗಾಧಿಕಾರಿ ಎಚ್.ಜಿ. ಚಂದ್ರಶೇಖರಯ್ಯ ಹೇಳಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಆಯೋಜಿಸಿದ್ದ 73ನೇ ಗಣರಾಜ್ಯೋತ್ಸವ ದಿನಾಚರಣೆ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಸಂವಿಧಾನ ನೀಡಿರುವ ಸಮಾನ ಅವಕಾಶಗಳು ದೇಶದ ಕಟ್ಟಕಡೆಯ ವ್ಯಕ್ತಿಗೂ ಸರಳವಾಗಿ ತಲುಪುವಂತೆ ನಾವು ನಡೆದುಕೊಂಡಾಗ ಮಾತ್ರ ಸಂವಿಧಾನಕ್ಕೆ ನೈಜ ಗೌರವ ಸಲ್ಲಿಸಿದಂತಾಗುತ್ತದೆ. ಬಾಬಾ ಸಾಹೇಬರ ಆಶಯದಂತೆ, ಅವರು ಸಂವಿಧಾನದಲ್ಲಿ ಉಲ್ಲೇಖಿಸಿರುವ ಸ್ವಾತಂತ್ರ್ಯದ ಪರಿಮಿತಿಯಲ್ಲಿ ಸಮಾನತೆಯ ಸನ್ಮಾರ್ಗದಲ್ಲಿ ಹಾಗೂ ಭ್ರಾತೃತ್ವದ ಬಾಂಧವ್ಯದ ಬೆಸುಗೆಯ ಕೊಂಡಿ ಸಡಿಲಗೊಳ್ಳದಂತೆ ನಾವು ನಡೆದುಕೊಳ್ಳುವ ಮೂಲಕ ಪ್ರಜಾತಂತ್ರ ವ್ಯವಸ್ಥೆಯನ್ನು ಎತ್ತಿಹಿಡಿಯಬೇಕಾದ ಅನಿವಾರ್ಯತೆ ಇದೆ ಎಂದರು.

ಕೋವಿಡ್ ಸಾಂಕ್ರಾಮಿಕ ಕಾಯಿಲೆಯ ಕರಿನೆರಳು ಗಣರಾಜ್ಯೋತ್ಸವದಂತಹ ರಾಷ್ಟ್ರೀಯ ಹಬ್ಬಗಳ ಜತೆ, ಇತರೆ ಧಾರ್ಮಿಕ ಆಚರಣೆಗಳ ಮೇಲೂ ತನ್ನ ಕರಾಳ ಛಾಯೆಯನ್ನು ಆವರಿಸಿಕೊಂಡಿದೆ. (3ನೇ ಪುಟಕ್ಕೆ)



# ಜನರ ನೆಮ್ಮದಿಗೆ ಸಂವಿಧಾನದ ಕೊಡುಗೆ ಕಾರಣ

## ಹರಿಹರ : ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಎಸ್. ರಾಮಪ್ಪ ವಿಶ್ಲೇಷಣೆ



ಹರಿಹರ, ಜ.26- ದೇಶದ ಜನತೆ ನೆಮ್ಮದಿ ಮತ್ತು ವಿಶ್ವಾಸದಿಂದ ಇರುವುದಕ್ಕೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಟ್ಟಿರುವ ಸಂವಿಧಾನದ ಕೊಡುಗೆ ಕಾರಣ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ನಗರದ ಗಾಂಧಿ ಮೈದಾನದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ನಡೆದ 73 ನೇ ಗಣರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚಿಸಿ, ವಿವಿಧ ಕಾನೂನು ಜಾರಿಗೆ ತಂದು ದೇಶದ ಜನರು ನೆಮ್ಮದಿಯಿಂದ ಇರುವಂತೆ ಮಾಡಿದ್ದಾರೆ. ದೇಶದ ಒಳಿತಿಗಾಗಿ ಶ್ರಮಿಸಿದ ಎಲ್ಲರನ್ನೂ ಸ್ಮರಿಸಿ, ಗೌರವಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ರಾಮಪ್ಪ ಹೇಳಿದರು.

ಧ್ವಜಾರೋಹಣ ನೆರವೇರಿಸಿದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, 1950ರ ಜನವರಿ 26ರಂದು ಕಾನೂನು ಚೌಕಟ್ಟಿನ ಮೇಲೆ ಆಡಳಿತ ನಡೆಸಲು ಸಂವಿಧಾನ ಜಾರಿಗೆ ಬಂದಿತು. ಜವಾಹರಲಾಲ್‌ನೆಹರು ಅವರು ಪ್ರಧಾನಿಯಾಗಿದ್ದಾಗ ಡಾ. ಅಂಬೇಡ್ಕರ್ ಅವರು ಕರಡು ಸಮಿತಿ ಅಧ್ಯಕ್ಷರಾಗಿ ಸಂವಿಧಾನ ರೂಪಿಸಿದ್ದರು ಎಂದರು.

ಭಾರತದ ಸಂವಿಧಾನದ ಅಡಿಯಲ್ಲಿ ಜಾತ್ಯತೀತ ಮನೋಭಾವ ಮತ್ತು ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು ಎಂಬ ಭಾವನೆ ಕಾಣಬಹುದು. ಸರ್ಕಾರವು ಸಹ ಜನರ ಒಳಿತಿಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಇಲ್ಲಿನ ಜನತೆ ನೆಮ್ಮದಿ ಜೀವನ ನಡೆಸುವುದಕ್ಕೆ ಬೇಕಾಗುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುತ್ತಾ ಕಲ್ಯಾಣ ಕರ್ನಾಟಕದತ್ತ ಸಾಗುತ್ತಿದೆ ಎಂದು ಹೇಳಿದರು.

ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಶಾರದಮ್ಮ, ಗುರುದೇವ, ಬಣಕಾರ ಮೃತ್ಯುಂಜಯ, ಸಾಕಮ್ಮ, ಐಗೂರು ಗಣೇಶ, ಪದ್ದಪ್ಪ (ಶಿಕ್ಷಣ ಇಲಾಖೆ), ಬಿ.ಎಸ್. ನಿರ್ಮಲ ಗುತ್ತೂರು, ಎಸ್.ಬಿ. ಲಲಿತಮ್ಮ ಬೆಳ್ಳೂಡಿ, ಭಾಗ್ಯ (ಅಂಗನವಾಡಿ ಕಾರ್ಯಕರ್ತರು), ನಾಗನಗೌಡ, ಪ್ರಶಾಂತ್ (ಕೃಷಿ), ಡಿ.ಟಿ. ಶ್ರೀನಿವಾಸ್, ದ್ವಾರಕೇಶ್ (ಪೊಲೀಸ್ ಇಲಾಖೆ), ನಾಗರಾಜ್, ಪರಮೇಶ್ವರಪ್ಪ (ವಾಹನ ಚಾಲಕ), ರವಿ (ಸಾಮಾಜಿಕ ಕ್ಷೇತ್ರ), ಡಾ. ನಾಗವೇಣಿ, ಸುಧಾ, ಮಂಜುನಾಥ್ ಹಣಿಗಿ, ರವಿಪ್ರಕಾಶ್ (ಆರೋಗ್ಯ ಕ್ಷೇತ್ರ), ನಿವೇದಿತಾ (ಜಾನಪದ ಕಲೆ), ಗಿರೀಶ್, ನವೀನ, ಶೇರಾಲಿ (ಕ್ರೀಡೆ), ವಿಶ್ವನಾಥ್ ಮೈಲಾಳ, ಮಂಜುನಾಥ್ ರಾಜನಹಳ್ಳಿ, ಚಂದ್ರಶೇಖರ್ ಕಂಬಾರ (ಪತ್ರಿಕಾ ಕ್ಷೇತ್ರ) ಸೇರಿದಂತೆ, ಇತರರನ್ನು ಸನ್ಮಾನಿಸಲಾಯಿತು.

ನಗರಸಭೆ ಅಧ್ಯಕ್ಷೆ ಶ್ರೀಮತಿ ರತ್ನ ಡಿ. ಉಜ್ಜೇಶ್, ಬಿಇಓ ಬಿ.ಸಿ. ಸಿದ್ದಪ್ಪ, ಇ.ಓ. ಗಂಗಾಧರನ್, ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ, ಸಿಪಿಐ ಸತೀಶ್ ಕುಮಾರ್, ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ನಾಗರತ್ನಮ್ಮ, ಸಿಡಿಪಿಓ ನಿರ್ಮಲ, ಡಾ ಚಂದ್ರ ಮೋಹನ್, ತೋಟಗಾರಿಕೆ ಇಲಾಖೆ ರೇಖಾ, ಕೃಷಿ ಇಲಾಖೆಯ ನಾರನಗೌಡ, ಲೋಕೋಪಯೋಗಿ ಇಲಾಖೆಯ ಚಂದ್ರಕಾಂತ, ಮಂಜುಳಾ, ಬಸವ ರಾಜಯ್ಯ, ಬಿ.ಬಿ. ರೇವಣ್ಣನಾಯ್ಕ್, ಕೊಟ್ರೇಶ್ ಭಾನುವಳ್ಳಿ, ಮುಖಂಡರಾದ ದಾದಾಪೀರ್ ಭಾನುವಳ್ಳಿ, ಪಿಎಸ್ಐ ಸುನೀಲ್ ಬಸವರಾಜ್, ನಳಿನಾ ಇತರರು ಹಾಜರಿದ್ದರು.

## ಗುಲಾಂ ನಬಿಗೆ ಪದ್ಮ ಭೂಷಣ

**(1ನೇ ಪುಟದಿಂದ)** ಗುರುತಿಸುತ್ತಿದೆ ಎಂಬುದು ವಿಡಂಬನೆ ಎಂದು ಮಾಜಿ ಕೇಂದ್ರ ಸಚಿವ ಕಪಿಲ್ ಸಿಬಾಲ್ ಹೇಳಿದ್ದಾರೆ.

ಪದ್ಮ ಪ್ರಶಸ್ತಿ ಪಡೆದ ನಂತರ ಆಜಾದ್ ಅವರು ಟ್ವಿಟ್ಟರ್ ಖಾತೆಯ ತಮ್ಮ ವಿವರಗಳಿಂದ ಕಾಂಗ್ರೆಸ್ ಉಲ್ಲೇಖವನ್ನು ತೆಗೆದುಹಾಕಿದ್ದಾರೆ ಎಂಬ ಮಾತುಗಳು ಕೇಳಿ ಬಂದಿದ್ದವು. ಆದರೆ, ತಮ್ಮ ಖಾತೆಯ ವಿವರಗಳು ಹಿಂದಿನಂತೆಯೇ ಇವೆ ಎಂದು ಆಜಾದ್ ಸ್ಪಷ್ಟನೆ ನೀಡಿದ್ದಾರೆ.

ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅವರು ಆಜಾದ್ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ್ದು, ಸಿಪಿಐ (ಎಂ) ನಾಯಕ ಬುದ್ಧದೇವ್ ಭಟ್ಟಾಚಾರ್ಯ ಅವರಂತೆ ಆಜಾದ್ ಸಹ ಪ್ರಶಸ್ತಿ ತಿರಸ್ಕರಿಸಬೇಕಿತ್ತು ಎಂದಿದ್ದಾರೆ.

ಆಜಾದ್ ಬೆಂಬಲಿಸಿರುವ ಲೋಕಸಭಾ ಸದಸ್ಯರಾದ ಮನೀಶ್ ತಿವಾರಿ, ಶಶಿ ಥರೂರ್, ಹರಿಯಾಣ ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡ, ರಾಜ್ಯಸಭೆಯಲ್ಲಿ ಕಾಂಗ್ರೆಸ್ ನಾಯಕರಾಗಿರುವ ಆನಂದ್ ಶರ್ಮ, ಕಾಂಗ್ರೆಸ್ ಮಾಜಿ ಸಂಸದ ರಾಜ್ ಬಬ್ಬರ್ ಅವರು ಪ್ರಶಸ್ತಿಗೆ ಆಯ್ಕೆಯಾಗಿರುವುದಕ್ಕೆ ಅಭಿನಂದಿಸಿದ್ದಾರೆ.

# ಕ್ಷಯ ಮುಕ್ತ ದೇಶಕ್ಕೆ ಕೈ ಜೋಡಿಸಿ

## ಯಲವಟ್ಟಿ: ಗ್ರಾ.ಪಂ.ಕಾರ್ಯಕ್ರಮದಲ್ಲಿ ಡಾ|| ಗಂಗಾಧರ್



ಮಲೇಬೆನ್ನೂರು, ಜ.26-ತಾಲ್ಲೂಕಿನ ಯಲವಟ್ಟಿ ಗ್ರಾ.ಪಂ.ಸಭಾಂಗಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆರೋಗ್ಯ ಅಮೃತ ಅಭಿಯಾನದಡಿಯಲ್ಲಿ ಹಮ್ಮಿಕೊಂಡಿದ್ದ 'ಕ್ಷಯ ಮುಕ್ತ ಭಾರತ ಮತ್ತು ಕ್ಷಯ ಮುಕ್ತ ಗ್ರಾ.ಪಂ.' ಕಾರ್ಯಕ್ರಮವನ್ನು ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿ ಡಾ|| ಗಂಗಾಧರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಭಾರತದಲ್ಲಿ ಪ್ರತಿ ವರ್ಷ 26 ಲಕ್ಷ ಜನರಿಗೆ ಕ್ಷಯ ಕಂಡು ಬರುತ್ತಿದ್ದು, ಇದರಲ್ಲಿ 2.50 ಲಕ್ಷ ಜನ ಸಾವನ್ನಪ್ಪುತ್ತಿದ್ದಾರೆ. ಸತತ 15 ದಿನಕ್ಕಿಂತ ಹೆಚ್ಚು ದಿನ ಜ್ವರ, ಕೆಮ್ಮು ಕಂಡುಬಂದರೆ ಅಥವಾ ಹಸಿವು ಆಗದೆ ಇರುವುದು, ಬೆವರುವುದು, ತೂಕ ಕಡಿಮೆ ಆಗುವುದು ಕ್ಷಯರೋಗದ ಲಕ್ಷಣಗಳಾಗಿವೆ ಎಂದು ವಿವರಿಸಿದರು.

ಪ್ರಧಾನಿಯವರು 2025ರ ವೇಳೆಗೆ ಕ್ಷಯ ಮುಕ್ತ ಭಾರತವನ್ನಾಗಿ ಮಾಡಲು ಸಂಕಲ್ಪ ಮಾಡಿದ್ದು, ಈ ನಿಟ್ಟಿನಲ್ಲಿ, ಆಯಾ ಗ್ರಾ.ಪಂ. ಸದಸ್ಯರು ಜನರಲ್ಲಿ ಕ್ಷಯ ರೋಗದ ಅರಿವು ಮೂಡಿಸಬೇಕು. ಆರಂಭಿಕ ಹಂತದಲ್ಲಿ ರೋಗವನ್ನು ಪತ್ತೆಮಾಡಿ ಚಿಕಿತ್ಸೆ ನೀಡಿದರೆ ಕ್ಷಯ ಮುಕ್ತ ಭಾರತ ಮಾಡಲು ಸಾಧ್ಯ. ಈ ದಿಸೆಯಲ್ಲಿ ಎಲ್ಲರೂ ಕೈ ಜೋಡಿಸಬೇಕು ಎಂದು ಗಂಗಾಧರ್ ಕರೆ ನೀಡಿದರು.

ಡಿಹೆಚ್ಓ ಡಾ|| ಚಂದ್ರಮೋಹನ್, ಜಿಲ್ಲಾ ಆರೋಗ್ಯ ಹಿರಿಯ ಮೇಲ್ವಿಚಾರಕ ಎಂ.ವಿ. ಹೊರಕೇರಿ, ಹೊಳೆಸಿರಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ|| ಚೇತನ್ ಅವರು ಕ್ಷಯ ರೋಗದ ಕುರಿತು ಅಗತ್ಯ ಮಾಹಿತಿ ನೀಡಿದರು.

ಇದೇ ವೇಳೆ ತಾಲ್ಲೂಕಿನ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ ಅವರು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕುರಿತು ಮಾತನಾಡಿ, ಹೆಣ್ಣು ಭ್ರೂಣ ಹತ್ಯೆ ನಿಲ್ಲಿಸಿ, ಹೆಣ್ಣು ಮಕ್ಕಳಿಗೆ ಪ್ರೋತ್ಸಾಯಿಸಬೇಕೆಂದರು.

ಗ್ರಾ.ಪಂ.ಅಧ್ಯಕ್ಷ ರಮೇಶ್, ಪಿಡಿಓ ರಾಮನಗೌಡ, ಆರೋಗ್ಯ ಸಿಬ್ಬಂದಿಗಳಾದ ಪ್ರಹ್ಲಾದ್, ಪ್ರಕಾಶ್ ನಾಯ್ಕ, ಸವಿತಾ, ಭಾಗ್ಯಮ್ಮ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಕುರೇಮಾಗಾನಹಳ್ಳಿ ಜಾತ್ರೆ ಮುಂದಕ್ಕೆ



**(1ನೇ ಪುಟದಿಂದ)** ಊರಿನ ಮನೆ, ಮನಗಳ ತುಂಬೆಲ್ಲಾ ದೇವಿ ಜಾತ್ರೆಯ ಸಡಗರ, ಸಂಭ್ರಮ ಮನೆಮಾಡಿಕೊಂಡಿತ್ತು. ಕಳೆದ ತಿಂಗಳಿನಿಂದಲೂ ಜಾತ್ರೆಯ ಭರ್ಜರಿ ತಯಾರಿಯಲ್ಲಿ ಗ್ರಾಮಸ್ಥರು ತೊಡಗಿಸಿಕೊಂಡಿದ್ದರು. ಪ್ರತಿ ಮನೆಗಳು ಸುಣ್ಣ, ಬಣ್ಣಗಳಿಂದ ಸಿಂಗಾರಗೊಂಡು ಅಲಂಕೃತವಾಗಿದ್ದವು. ಇನ್ನೇನು ಜಾತ್ರೆ ಹದಿನೈದು ದಿನ ಬಾಕಿ ಇರುವಾಗಲೇ ನಾಡಿಗೆ ಅಪ್ಪಳಿಸಿದ ಕೋವಿಡ್-19 ರೂಪಾಂತರಿ ಓಮಿಕ್ರಾನ್ ವೈರಸ್‌ನ ಮೂರನೇ ಅಲೆ ಅಬ್ಬರಿಸುತ್ತಿರುವ ಪರಿಣಾಮ ಇಲ್ಲಿನ ಜಾತ್ರೆಯ ಮೇಲೆ ಕರಿನೆರಳು ಆವರಿಸಿದೆ.

ದೇವಿಯ ಜಾತ್ರೆಗೆ ಸುತ್ತಮುತ್ತಲಿನ ಅನೇಕ ಗ್ರಾಮಗಳು ಸೇರಿದಂತೆ, ಗಡಿ ಅಂಚಿನ ದಾವಣಗೆರೆ ಜಿಲ್ಲೆಯ ದಾವಣಗೆರೆ ಹಾಗೂ ಜಗಳೂರು ತಾಲ್ಲೂಕಿನ ಗ್ರಾಮಗಳ ಭಕ್ತರು ಜಾತ್ರೆಯಲ್ಲಿ ಪಾಲ್ಗೊಳ್ಳುವ ಮೂಲಕ ದೇವಿಯ ಆಶೀರ್ವಾದ ಪಡೆದು, ವಿವಿಧ ಹರಕೆ ತೀರಿಸಿ ಪುನೀತರಾಗುತ್ತಿದ್ದರು. ಹೀಗಾಗಿ ಸರ್ಕಾರದ ಮಾರ್ಗಸೂಚಿ ಅನ್ವಯ ವೈರಸ್ ಸರಪಳಿಯನ್ನು ಕತ್ತರಿಸುವ ನಿಟ್ಟಿನಲ್ಲಿ ಕೈಜೋಡಿಸುವ ಸಲುವಾಗಿ ಅನಿವಾರ್ಯವಾಗಿ ಜಾತ್ರೆಯನ್ನು ಗ್ರಾಮಸ್ಥರು ಮುಂದೂಡುವ ನಿರ್ಧಾರ ಮಾಡಿದ್ದಾರೆ.

ಈ ಕುರಿತು ಪ್ರಗತಿಪರ ರೈತ ಕೆ.ಎನ್. ಪ್ರಕಾಶ್ ಹಾಗೂ ಯುವ ಮುಖಂಡ ಫಣಿಯಾಪುರ ಲಿಂಗರಾಜ್ ಮಾತನಾಡಿ, ಕುರೇಮಾಗಾನಹಳ್ಳಿ ಗ್ರಾಮದ ಆರಾಧ್ಯ ದೈವ, ಶಕ್ತಿ ಸ್ವರೂಪಿಣಿಯಾದ ದುರುಗಮ್ಮದೇವಿ ಜಾತ್ರೆ ತಲೆ ತಲಾಂತರಗಳಿಂದಲೂ ಇಲ್ಲಿನ ಜನ ಪ್ರತಿ ಒಂಭತ್ತು ವರ್ಷಗಳಿಗೆ ಒಮ್ಮೆ ಶ್ರದ್ಧಾಭಕ್ತಿಪೂರ್ವಕವಾಗಿ ಆಚರಿಸುವ ಮೂಲಕ ದೇವಿಯ ಕೃಪೆಗೆ ಪಾತ್ರರಾಗುತ್ತಾ ಬಂದಿದ್ದಾರೆ. ದೇವಿ ಆರಾಧನೆ, ಪೂಜಾದಿ ಆಚರಣೆ ಇಲ್ಲಿ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಶ್ರದ್ಧಾಭಕ್ತಿಯಿಂದ ನೆರವೇರುತ್ತಿರುವುದು ವಿಶೇಷ.

ದೇವಿಗೆ ಪ್ರಾಂಜಲ ಮನಸ್ಸಿನಿಂದ ಹರಕೆ ಹೊತ್ತರೆ, ಇಷ್ಟಾರ್ಥಗಳನ್ನು ಪೂರೈಸುತ್ತಾಳೆ. ಇಲ್ಲಿನ ಕೃಷಿಕರು ದೇವಿಗೆ ನೈವೇದ್ಯ ಸಮರ್ಪಿಸಿ, ಒಕ್ಕಲುತನ ಆರಂಭಿಸುವ ಪರಿಪಾಠ ಈಗಲೂ ಪರಂಪರಾಗತವಾಗಿ ನಡೆದುಬಂದಿದೆ. ದೇವಿ ಜಾತ್ರೆ ನಡೆದು, ಮೂರು ದಿನಗಳವರೆಗೂ ಗ್ರಾಮದಲ್ಲಿ ಪ್ರತಿ ಮನೆಯಲ್ಲಿಯೂ ಮಾಂಸಹಾರ ಅಡುಗೆ ನಿಷಿದ್ಧ. ಒಂದು ವೇಳೆ ಈ ಸಂಪ್ರದಾಯ ಉಲ್ಲಂಘಿಸಿದರೆ ತೊಂದರೆ, ತಾಪತ್ರಯಗಳು ಸಂಭವಿಸುತ್ತವೆ ಎನ್ನುತ್ತಾರೆ. ಗ್ರಾಮದ ಜಾತ್ರೆಯನ್ನು ಈ ಬಾರಿ ಮುಂದೂಡಿರುವ ಹಿನ್ನೆಲೆಯಲ್ಲಿ ಮಂಗಳವಾರ ಸಾಂಪ್ರದಾಯಿಕ ಪರಂಪರೆಗಳನ್ನು ಕೈಬಿಡಬಾರದು ಎನ್ನುವ ನಂಬಿಕೆಯಿಂದಾಗಿ, ಆರಾಧ್ಯದೇವಿ ದುರುಗಮ್ಮದೇವಿ ದೇವಸ್ಥಾನಕ್ಕೆ ತೆರಳಿದ ಗ್ರಾಮಸ್ಥರು, ಸರಳವಾಗಿ ಉಡಿ ತುಂಬುವ ಕಾರ್ಯಕ್ರಮ ನಡೆಸಿದರು. ನಾಡಿಗೆ ಅಪ್ಪಳಿಸಿದ ಕೊರೊನಾ ಸಾಂಕ್ರಾಮಿಕ ರೋಗ ನಿರ್ಮೂಲನೆಯಾಗಲೀ, ಮಳೆ, ಬೆಳೆ ಹಸನಾಗಲೀ, ಜನ ಜಾನುವಾರುಗಳಿಗೆ ಯಾವ ಕಂಟಕಗಳು ಸುಳಿಯದಿರಲೀ ಎಂಬ ಬೇಡಿಕೆಯೊಂದಿಗೆ ಕಳಸ ಹೊತ್ತ ಮಹಿಳೆಯರು ಪೂಜಾದಿ ಕಾರ್ಯಕ್ರಮ ನೆರವೇರಿಸಿದರು. ಬಳಿಕ ಗ್ರಾಮದ ಆಂಜನೇಯ ಸ್ವಾಮಿ, ಹುಲಿಗೆಮ್ಮ ದೇವಿ, ಗಲ್ಲೇದುರುಗಮ್ಮ ದೇವಿ, ಉಚ್ಚಂಗೆಮ್ಮ ದೇವಿ, ಮುಸ್ಟೂರಮ್ಮ ದೇವಿ ಸೇರಿದಂತೆ ಗ್ರಾಮದ ಎಲ್ಲಾ ಗುಡಿಗಳಿಗೂ ತೆರಳಿ ಉಡಿ ತುಂಬುವ ಮೂಲಕ ಜಾತ್ರೆಯ ಸೇವೆ ಸಲ್ಲಿಸಿದರು ಎಂದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯ್ತಿ ಸದಸ್ಯರಾದ ಪರಮೇಶ್ವರಪ್ಪ, ಮಂಜಮ್ಮ, ಗ್ರಾಮದ ಮುಖಂಡರಾದ ಕೆಂಚವೀರಪ್ಪ, ತಳವಾರ ರಂಗಪ್ಪ, ಬಣಕಾರ ಬಸವರಾಜ, ವಿಜಯಕುಮಾರ್, ಆಲೂರು ಹನುಮಂತಪ್ಪ, ರಾಘವೇಂದ್ರ, ವೀರೇಶ್, ಮಂಜುನಾಥ, ಪ್ರಶಾಂತ, ನಾಗಭೂಷಣ, ಅರುಣ್, ನವೀನ್ ಇತರರು ಭಾಗಿಯಾಗಿದ್ದರು

# ಗ್ರಾಮ ಒನ್ ಕೇಂದ್ರದಿಂದ ಬದುಕು ಹಸನು

**(1ನೇ ಪುಟದಿಂದ)** ಭೈರತಿ ಬಸವರಾಜ್ ಹೇಳಿದರು.

ತಾಲ್ಲೂಕಿನ ಮಾಯಕೊಂಡ ಗ್ರಾಮದ ಗ್ರಾಮ ಒನ್ ಕೇಂದ್ರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವರ್ಚ್ಯುಯಲ್ ವೇದಿಕೆ ಮೂಲಕ ಚಾಲನೆ ನೀಡಿದ ನಂತರ ಅವರು ಮಾತನಾಡಿದರು.

ಇಲ್ಲಿನ ಅಕ್ಕಪಕ್ಕದ ಗ್ರಾಮಸ್ಥರು ದಾವಣಗೆರೆಗೆ ಹೋಗಿ ಬರಲು 200 ರಿಂದ 300 ರೂ ಖರ್ಚಾಗುತ್ತಿದ್ದು, ಅದರೊಂದಿಗೆ ಸಮಯವೂ ಉಳಿತಾಯವಾಗಿದೆ. ಎಲ್ಲಾ ದಾಖಲೆಗಳು ಗ್ರಾಮ ಒನ್ ಕೇಂದ್ರದಲ್ಲಿ ಸಿಗುವುದರಿಂದ ಸಾರ್ವಜನಿಕರಲ್ಲಿ ಸಮಾಧಾನ ತಂದಿದೆ ಎಂದರು.

ಈಗಾಗಲೇ ನಾನು ಹಲವಾರು ಕೇಂದ್ರಗಳಿಗೆ ಭೇಟಿ ನೀಡಿದ್ದು, ಕೇಂದ್ರಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಇಂದು ಅನೇಕ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳ ಕಾರ್ಡ್ ನೀಡಲಾಗುತ್ತಿದೆ. ವಿಶೇಷವಾಗಿ ಮಹಿಳೆಯೊಬ್ಬರು 5 ಯೋಜನೆಗಳ ಪ್ರಯೋಜನ ಪಡೆದುಕೊಂಡಿದ್ದಾರೆಂದರು.

ಮಾಯಕೊಂಡ ಕ್ಷೇತ್ರದ ಶಾಸಕ ಪ್ರೊ.ಲಿಂಗಣ್ಣ ಮಾತನಾಡಿ, ನನ್ನ ಕ್ಷೇತ್ರದಲ್ಲಿ ಗ್ರಾಮ ಒನ್ ಕೇಂದ್ರವನ್ನು ಮುಖ್ಯಮಂತ್ರಿಗಳು ಉದ್ಘಾಟಿಸುತ್ತಿರುವುದು ಬಹಳ ಖುಷಿಯ ವಿಚಾರ, ಸಾರ್ವಜನಿಕರಿಗೆ ಉಪಯೋಗವಾಗುವ ಗ್ರಾಮ ಒನ್ ಕೇಂದ್ರ ಆರಂಭವಾಗಿರುವುದು ಸಂತಸ ತಂದಿದೆ ಎಂದರು.

**ಸಿ.ಎಂ. ಅಭಯ :** ಕಾರ್ಯಕ್ರಮದಲ್ಲಿ ಶ್ಯಾಗಲೆ ಗ್ರಾಮದ ಅನುಷ ಎಂಬ ವಿಧವೆ ಮಹಿಳೆ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ನಾನು ಈಗಾಗಲೇ ಈ ಕೇಂದ್ರದ ಮೂಲಕ 5 ಯೋಜನೆಗಳ ಪ್ರಯೋಜನ ಪಡೆದಿದ್ದು, ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ್ದೇನೆ. ನನ್ನ ಅತ್ತೆ, ಮಾವ ನನ್ನನ್ನು ಮನೆಯಿಂದ ಹೊರಹಾಕಿದ್ದು ಜೀವನ ಕಟ್ಟಿಕೊಳ್ಳಲು ದಯಮಾಡಿ ಅಂಗನವಾಡಿ ಕಾರ್ಯಕರ್ತೆ ಹುದ್ದೆ ನೀಡುವಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ, ಆ ಮಹಿಳೆ ವಿಧವೆ ಇದಾರೆ ಅಂಥವರಿಗೆ ಪ್ರಾಶಸ್ತ್ಯ ಕೊಡಬೇಕು. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿ ಆ ಮಹಿಳೆಗೆ ನೆರವಾಗಲು ಸೂಚಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಸಿಇಓ ವಿಜಯ ಮಹಾಂತೇಶ್ ದಾನಮ್ಮನವರ್, ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಉಪವಿಭಾಗಾಧಿಕಾರಿ ಮಮತ ಹೊಸಗೌಡರ್, ತಹಶೀಲ್ದಾರ್ ಗಿರೀಶ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಜಗಳೂರು : ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ




ಜಗಳೂರು,ಜ.26- ತಾಲ್ಲೂಕಿನ ಬಿಳಿಚೋಡು ಕರ್ನಾಟಕ ಪಬ್ಲಿಕ್ ಸ್ಕೂಲ್ ನ 10ನೇ ತರಗತಿ ವಿದ್ಯಾರ್ಥಿಗಳಿಗೆ, ಬಿಳಿಚೋಡು ಶೆಟ್ರು ಕಲಿವೀರಪ್ಪ ಮತ್ತು ಚನ್ನಬಸಮ್ಮ ಮನೋಲಿ ಟ್ರಸ್ಟ್ ಹಾಗು ದಾವಣಗೆರೆ ರೋಟರಿ ಕ್ಲಬ್ ವತಿಯಿಂದ ನೀಡಲಾದ ವಿದ್ಯಾಸೇತು ಪುಸ್ತಕಗಳನ್ನು ವಿತರಿಸಲಾಯಿತು.

ರೋಟರಿ ಕ್ಲಬ್ ಅಧ್ಯಕ್ಷ ಆರ್.ಟಿ. ಮೃತ್ಯುಂಜಯ, ರೋಟರಿ ಮಾಜಿ ರಾಜ್ಯಪಾಲ ಎಸ್.ಕೆ.ವೀರಣ್ಣ, ಪಿ.ಬಿ. ಪ್ರಕಾಶ್, ಮುಖ್ಯೋಪಾಧ್ಯಾಯಿನಿ ವೀರಮ್ಮ ಮತ್ತಿತರರು ಉಪಸ್ಥಿತರಿದ್ದರು.

# ಹೆಚ್. ಕಡದಕಟ್ಟೆಯಲ್ಲಿ ವಿದ್ಯಾರ್ಥಿಗಳಿಗೆ ಕೊರೊನಾ



ಹೊನ್ನಾಳಿ, ಜ.26- ತಾಲ್ಲೂಕಿನ ಎಚ್. ಕಡದಕಟ್ಟೆ ಗ್ರಾಮದ ಸಾಯಿ ಗುರುಕುಲ ವಸತಿಯುತ ವಿದ್ಯಾಸಂಸ್ಥೆಯ 8 ವಿದ್ಯಾರ್ಥಿಗಳು ಮತ್ತು 6 ಶಿಕ್ಷಕರು, ಓರ್ವ ಸಿಬ್ಬಂದಿ ಸೇರಿ ಒಟ್ಟು 15 ಜನರಿಗೆ ಬುಧವಾರ ಕೊರೊನಾ ದೃಢಪಟ್ಟ ಹಿನ್ನೆಲೆಯಲ್ಲಿ, ವಿದ್ಯಾಸಂಸ್ಥೆಗೆ ಇಂದಿನಿಂದ ದಿನಾಂಕ 29ರ ಶನಿವಾರದವರೆಗೆ ರಜೆ ಘೋಷಿಸಲಾಗಿದೆ ಎಂದು ಸಾಯಿ ಗುರುಕುಲ ವಸತಿಯುತ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಜಿ. ಮರಿಗೌಡ ತಿಳಿಸಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಇ. ರಾಜೀವ್ ಸೂಚನೆಯ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿರುವ ಅವರು, ಜ.31ರ ಸೋಮವಾರದಿಂದ ಶಾಲೆ ಪುನರಾರಂಭವಾಗಲಿದ್ದು, ವಿದ್ಯಾರ್ಥಿಗಳು-ಶಿಕ್ಷಕರೆಲ್ಲರೂ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಕಡ್ಡಾಯ ಎಂದರು. ಪ್ರಯೋಗಾಲಯ ತಂತ್ರಜ್ಞರಾದ ಕುಮಾರ್, ಗಿರೀಶ್ ಕುಮಾರ್, ಡಾಟಾ ಎಂಟ್ರಿ ಆಪರೇಟರ್‌ಗಳಾದ ಸ್ನೇಹ, ಗಿರೀಶ್ ಕೊರೊನಾ ಟೆಸ್ಟ್ ಮಾಡಿ, ಕೊರೊನಾ ಸೋಂಕಿತರಿಗೆ ಟ್ಯಾಬ್ಲೆಟ್ ಕಿಟ್ ಮತ್ತು ಮಾಸ್ಕ್‌ಗಳನ್ನು ವಿತರಿಸಿದರು.

ಸಾಯಿ ಗುರುಕುಲ ವಸತಿಯುತ ವಿದ್ಯಾಸಂಸ್ಥೆಯ ಶಿಕ್ಷಣ ಸಂಯೋಜಕ ಹರೀಶ್ ಕುಮಾರ್ ಹಾಗು ಇತರರು ಇದ್ದರು.

## ರಾಯಣ್ಣ ಸೈನಿಕ ಶಾಲೆಗೆ ಸಕಲ ಸಿದ್ಧತೆ

**(1ನೇ ಪುಟದಿಂದ)** ಶಾಲೆಗಾಗಿ ಈಗಾಗಲೆ 55 ಕೋಟಿ ರೂ. ಬಿಡುಗಡೆ ಮಾಡಿದೆ. ಈ ವರ್ಷವೇ ಶಾಲೆ ನಿರ್ಮಾಣ ಪೂರ್ಣವಾಗಲಿದೆ ಎಂದಿದ್ದಾರೆ. ಶಾಲೆಯನ್ನು ದತ್ತು ಪಡೆಯುವ ಬಗ್ಗೆ ರಕ್ಷಣಾ ಸಚಿವಾಲಯದ ಜೊತೆ ಚರ್ಚಿಸಲಾಗುತ್ತಿದೆ. ಈ ಶಾಲೆಯನ್ನು ಸೈನಿಕ ಶಾಲೆಯಾಗಿ ಪರಿವರ್ತಿಸುವುದು ಬಹುತೇಕ ನಿಶ್ಚಿತವಾಗಿದೆ ಎಂದವರು ಹೇಳಿದ್ದಾರೆ.


**ಸೈಟು ಮಾರಾಟಕ್ಕೆ (JHP)**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ
20x30 ಪೂರ್ವ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಮಾರಾಟಕ್ಕೆ/ಖರೀದಿಗೆ ವಿಚಾರಿಸಿರಿ**
ಸಿದ್ದವೀರಪ್ಪ ಬಡಾವಣೆ, ಕುವೆಂಪು ಲೇ ಔಟ್‌ನಲ್ಲಿ ಬಂಗಲೆ ಸೈಟ್‌ಗಳು ಮಾರಾಟಕ್ಕಿವೆ.
ಕೆ.ಬಿ. ಸುರೇಶ್
ಫೋ. : 95911 60520

**ಬೇಕಾಗಿದ್ದಾರೆ**
ಸಪ್ಲೈಯರ್ಸ್ ಮತ್ತು ಕ್ಲೀನರ್ ಬೇಕಾಗಿದ್ದಾರೆ. ಫ್ಯಾಮಿಲಿ ಇದ್ದರೆ ವಸತಿ ಸೌಲಭ್ಯವುಂಟು. ಸಂಪರ್ಕಿಸಿ :
ವೀರಶೈವ ಖಾನಾವಳಿ
ಎಂ.ಸಿ.ಸಿ. 'ಬಿ' ಬ್ಲಾಕ್, ಕಡ್ಲಿ ನರ್ಸಿಂಗ್ ಹೋಂ ಹತ್ತಿರ, ದಾವಣಗೆರೆ.
99017 70830

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2%) ಅರ್ಧ ಪರ್ಸೆಂಟ್ ಕಮೀಷನ್‌ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440 63409
(ಸೈಟು, ಮನೆ ಮಾರುವವರಿಗೆ ಮಾತ್ರ ಅನ್ವಯಿಸುತ್ತದೆ, ಕೊಳ್ಳುವವರಿಗಲ್ಲ*)

**ಮಾರಾಟಕ್ಕಿದೆ**
ಸಿಮೆಂಟ್ ಬ್ರಿಕ್ಸ್ ಫ್ಯಾಕ್ಟರಿ ಮಾರಾಟಕ್ಕಿದೆ. ಸರ್ವೆ ನಂಬರ್ 134/3 ಒಂದು ಎಕರೆ ಎನ್.ಎ. ಆಗಿದೆ 27 ಗುಂಟೆ ಹೊಲ ಮಾರಾಟಕ್ಕಿದೆ -ಐಗೂರು, ದಾವಣಗೆರೆ ಜಿಲ್ಲೆ
90365 59096, 92428 37951

**ಬೇಕಾಗಿದ್ದಾರೆ**
5 ವರ್ಷ (ಎಫ್ ಎಂ ಸಿ ಜಿ) ಅನುಭವವುಳ್ಳ ಸೇಲ್ಸ್ ಆಫೀಸರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸಿ:
97432 09680

**ಕರ್ನಾಟಕ ಗೃಹಮಂಡಳಿಯಲ್ಲಿ ಮನೆಗಳು, ಸೈಟ್‌ಗಳು ಮಾರಾಟಕ್ಕಿವೆ**
30x40 ಮನೆ North, 30x50 ಮನೆ East, 30x50 East ಸೈಟ್ 30x40 South ಸೈಟ್ 30x50 North ಸೈಟ್ 40x60 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟು ಬೇಕಾಗಿದೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x40 ಅಥವಾ 30x50 ಪೂರ್ವ ಮತ್ತು ಉತ್ತರಕ್ಕೆ ಇರುವ ಸೈಟ್ ಖರೀದಿಗೆ ಬೇಕಾಗಿದೆ. ಪೂರಾ ಡಿ.ಡಿ. ಮುಖಾಂತರ 15 ದಿನಗಳಲ್ಲಿ ರಿಜಿಸ್ಟರ್ ಮಾಡಿಕೊಳ್ಳಲಾಗುವುದು.
ಸಂಪರ್ಕಿಸಿ : 80503 98121

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಪಾಸ್‌ಪೋರ್ಟ್ ಕಳೆದಿದೆ**
ನಯನ ಕವಲೇರ ನಾಗರಾಜ್, ವಾಸ: # 2844 'ನಯನ' 4ನೇ ಮೇನ್, ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ ದಾವಣಗೆರೆ ಆದ ನಾನು ದಿನಾಂಕ 14.01.2022ರಂದು ಮನೆ ಸ್ವಚ್ಛಗೊಳಿಸುವಾಗ ಸದರಿ ಪಾಸ್ ಪೋರ್ಟ್ ನಂ K3229172 ಕಳೆದಿದ್ದು ಎಷ್ಟೇ ಹುಡುಕಿದರೂ ಸಿಕ್ಕಿರುವುದಿಲ್ಲ. ಯಾವುದೇ ಹಣಕಾಸು ಸಂಸ್ಥೆ, ಬ್ಯಾಂಕ್, ಪೊಲೀಸ್ ಠಾಣೆಗಾಗಲೀ ಹಾಜರುಪಡಿಸಿರುವುದಿಲ್ಲ ಅಥವಾ ಅಡಮಾನ ಪರಭಾರೆ ಮಾಡಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ. ಕಳೆದು ಹೋಗಿರುವ ಪಾಸ್ ಪೋರ್ಟ್ ಯಾರಿಗಾದರೂ ಸಿಕ್ಕಲ್ಲಿ ಈ ಮೇಲ್ಕಂಡ ವಿಳಾಸಕ್ಕೆ ಹಿಂದಿರುಗಿಸಲು ಕೋರುತ್ತೇನೆ.
- ನಯನ ಕವಲೇರ ನಾಗರಾಜ್

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆಯಲ್ಲಿ ಡಾಲರ್ಸ್ ಕಾಲೋನಿಯಲ್ಲಿ 70x63 Corner, 30x63 Corner, 40x63 West, 30x50, 30x50 West ಅಕ್ಕ-ಪಕ್ಕ, 30x50 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗಿದೆ**
ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ 4ನೇ ಮೇನ್, 10ನೇ ಕ್ರಾಸ್‌ನಲ್ಲಿ ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ ಇರುವ ಹೊಸ ಮನೆ ಬಾಡಿಗೆಗಿದೆ. ಸಸ್ಯಹಾರಿಗಳಿಗೆ ಮಾತ್ರ.
ಸಂಪರ್ಕಿಸಿ
98865 73205

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್ ದಾವಣಗೆರೆ.
ರೂಂ ಬಾಡಿಗೆಗೆ ಇದೆ
ಚಾಮರಾಜ ಪೇಟೆ, ದಾವಣಗೆರೆ.
ಫೋ. : 82177 72482

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**JOBS**
Sales Manager/Executives
Any Degree (English, Computer Knowledge)
Office Job/Marketing/
Field Work, Male/Female
Freshers/Experienced
98444 92888

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804


## ಹರಿಹರ : ಬಜೆಟ್ ಪೂರ್ವಭಾವಿ ಸಭೆ

ಹರಿಹರ ನಗರಸಭೆಯ 2022-23 ನೇ ಸಾಲಿನ ಆಯ ವ್ಯಯ ತಯಾರಿಸಲು, ಸಾರ್ವಜನಿಕರ ಹಾಗೂ ಸಂಘ-ಸಂಸ್ಥೆಗಳ ಸಲಹೆ, ಸೂಚನೆ ಪಡೆಯುವ ನಿಟ್ಟಿನಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಗರಸಭೆಯ ಸಭಾ ಭವನದಲ್ಲಿ 1ನೇ ಹಂತದ ಸಾರ್ವಜನಿಕ ಸಭೆ ಕರೆಯಲಾಗಿದೆ ಎಂದು ನಗರಸಭೆಯ ಪೌರಾಯುಕ್ತರು ಮತ್ತು ಅಧ್ಯಕ್ಷರು ತಿಳಿಸಿದ್ದಾರೆ.


**WANTED**
Wanted for Digital Marketing, DTP Works, Office Work, (10000+Salary for Experienced )
Call 97392 30843

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**WANTED**
Accountant
Min. 1 Year Experience in Tally
send your resume to
veerump@gmail.com


# ಟಿಪ್ಪು, ಕಲಾಂ ಚಿತ್ರ ಇಲ್ಲದ್ದಕ್ಕೆ ಆಕ್ಷೇಪ

**(1ನೇ ಪುಟದಿಂದ)** ತೆರವುಗೊಳಿಸಿದರು. ಈ ಸಂದರ್ಭದಲ್ಲಿ ಧನ್ಯೋಸ್ಮಿ ಭರತಭೂಮಿ ಸಂಘಟನೆ ಗೌರವಾಧ್ಯಕ್ಷ ಡಾ. ಜಿ.ಜೆ. ಮಹೆಂದಳೆ, ವಾಗ್ಮಿ ಗುರುಪ್ರಸಾದ್ ಆನ್ವೇರಿ, ಅಧ್ಯಕ್ಷ ಚರಣ್ ಅಂಗಡಿ, ವಿಜಯಕುಮಾರ್ ಉದಗಟ್ಟಿ, ಬಿ.ಸಿ. ಮಧು, ಮಹೇಶಪ್ಪ, ಗೋಣಿಬಸಪ್ಪ, ಸಿದ್ಧಾರ್ಥ ಯಡಿಯಾಪುರ ಮಿಥುನ್ ಕಟವಟೆ, ನಾಗರಾಜ್, ಶ್ಯಾಮ್, ಗಣೇಶ, ಮಲ್ಲೇಶಪ್ಪ ನಗರ ಘಟಕದ ಬಿಜೆಪಿ ಅಧ್ಯಕ್ಷ ಅಜಿತ್ ಸಾವಂತ್, ಯುವ ಘಟಕದ ಕಾರ್ಯದರ್ಶಿ ರವಿ ರಾಯ್ಕರ್, ಎಬಿವಿಪಿ ವೀರೇಶ್ ಅಜ್ಜಣ್ಣನವರ್, ಹಿಂದು ಜಾಗರಣ ವೇದಿಕೆ ಸಂಚಾಲಕ ದಿನೇಶ್ ಹರೀಶ್, ಸಾತ್ವಿಕ್ ಮೆಹೆಂದಳೆ ಮತ್ತಿತರರು ತಹಶೀಲ್ದಾರರ ಕಚೇರಿಯಲ್ಲಿ ತೀವ್ರ ಪ್ರತಿಭಟನೆ ನಡೆಸಿದರು.

ಆಗ ಘಟನೆಯ ಬಗ್ಗೆ ವಿಷಾದ ವ್ಯಕ್ತಪಡಿಸಿದ ತಹಶೀಲ್ದಾರ್ ರಾಮಚಂದ್ರಪ್ಪ, ಮುಂದೆ ಈ ರೀತಿಯ ಘಟನೆ ಆಗದಂತೆ ಎಚ್ಚರ ವಹಿಸುವುದಾಗಿ ತಿಳಿಸಿದರು. ನಂತರ ಆಯೋಜಕರು ಪ್ರತಿಭಟನೆ ನಿಲ್ಲಿಸಿದ್ದಾರೆ.

ಸಿಪಿಐ ಸತೀಶ್ ಕುಮಾರ್ ಹಾಗೂ ಪಿಎಸ್ಐ ಸುನಿಲ್ ಬಸವರಾಜ್ ಅವರು ಘಟನಾ ಸ್ಥಳದಲ್ಲಿದ್ದು, ಪರಿಸ್ಥಿತಿ ತಿಳಿಗೊಳಿಸಲು ನೆರವಾದರು.

## ಬೈಪಾಸ್‌ನಲ್ಲಿ ರಸ್ತೆ ಅಪಘಾತ ಸಾವು, ಓರ್ವನ ಸ್ಥಿತಿ ಗಂಭೀರ

ದಾವಣಗೆರೆ, ಜ.26- ಟೈರ್ ಸ್ಫೋಟಗೊಂಡ ಪರಿಣಾಮ ಒಣ ಮೆಣಸಿನಕಾಯಿ ಸಾಗಿಸುತ್ತಿದ್ದ ವಾಹನವೊಂದು ಪಲ್ಟಿಯಾಗಿ ಓರ್ವ ವ್ಯಾಪಾರಿ ಮೃತಪಟ್ಟು ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಗರದ ಹೊರಭಾಗದ ಶಾಮನೂರು ಬಳಿಯ ರಾಷ್ಟ್ರೀಯ ಹೆದ್ದಾರಿ-4 ರಲ್ಲಿ ಇಂದು ಸಂಭವಿಸಿದೆ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ರಾಂಪುರದ ಲಾಲ್ ಸ್ವಾಮಿ (45) ಮೃತ ವ್ಯಾಪಾರಿ. ರಾಮಾಂಜನೇಯನ ಸ್ಥಿತಿ ಗಂಭೀರವಾಗಿದೆ. ತಮ್ಮ ಊರಾದ ಆಂಧ್ರದ ಅನಂತಪುರ ಜಿಲ್ಲೆ ವೈ. ರಾಂಪುರದಿಂದ ಬ್ಯಾಡಗಿಗೆ ಒಣ ಮೆಣಸಿನಕಾಯಿ ಮಾರಾಟ ಮಾಡಲು ನಾಲ್ವರು ವ್ಯಾಪಾರಿಗಳು ಟಾಟಾ ಏಸ್ ವಾಹನದಲ್ಲಿ ಮೆಣಸಿನ ಕಾಯಿ ತುಂಬಿದ ಚೀಲಗಳನ್ನು ಹೇರಿಕೊಂಡು ಹೋಗುತ್ತಿದ್ದರು. ರಾಷ್ಟ್ರೀಯ ಹೆದ್ದಾರಿ 4 ರಲ್ಲಿನ ರಾಸ್ತಾ ಹೋಟೆಲ್ ಮುಂಭಾಗದಲ್ಲಿ ಏಕಾಏಕಿ ಟಾಟಾ ಏಸ್ ನ ಟೈರ್ ಸ್ಫೋಟಗೊಂಡಿದೆ. ಬಳಿಕ ನಿಯಂತ್ರಣ ತಪ್ಪಿ ವಾಹನ ಪಲ್ಟಿಯಾಗಿದೆ. ವಾಹನದಡಿ ಸಿಲುಕಿದ್ದ ನಾಲ್ವರು ಗಂಭೀರವಾಗಿ ಗಾಯಗೊಂಡರು. ಗಾಯಾಳುಗಳನ್ನು ಕೂಡಲೇ ದಾವಣಗೆರೆ ಜಿಲ್ಲಾಸ್ಪತ್ರೆಗೆ ರವಾನೆ ಮಾಡಲಾಗಿಯಿತು. ಆದರೂ ಓರ್ವ ಮೃತಪಟ್ಟಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಇನ್ನೋರ್ವನ ಸ್ಥಿತಿ ಗಂಭೀರವಾಗಿದೆ.

## ಕೆ.ಎನ್. ಸ್ವಾಮಿಗೆ ಪತ್ನಿ ವಿಯೋಗ



ದಾವಣಗೆರೆ, ಜ.26- ನಗರದ ನಿವೃತ್ತ ಶಿಕ್ಷಕರೂ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರೂ, ಹಿರಿಯ ಸಾಹಿತಿಗಳೂ ಆದ ಕೆ.ಎನ್. ಸ್ವಾಮಿ ಅವರ ಧರ್ಮಪತ್ನಿ - ನಿವೃತ್ತ ಶಿಕ್ಷಕಿ ಶ್ರೀಮತಿ ಎಸ್.ಸಿ. ಕಮಲಾಕ್ಷಮ್ಮ ಅವರು ಇಂದು ಸಂಜೆ ನಿಧನರಾದರು.

ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 27ರ ಗುರುವಾರ ಬೆಳಿಗ್ಗೆ 9.30ಕ್ಕೆ ವೈಕುಂಠ ಶಾಂತಿಧಾಮದಲ್ಲಿ ನಡೆಯಲಿದೆ.

# ದಾವಣಗೆರೆ ಕ್ಲಬ್‌ನಿಂದ 73ನೇ ಗಣರಾಜ್ಯೋತ್ಸವ



ದಾವಣಗೆರೆ, ಜ. 26- ದಾವಣಗೆರೆ ಕ್ಲಬ್ ವತಿಯಿಂದ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕ್ಲಬ್ ಅಧ್ಯಕ್ಷ ಮತ್ತಿಹಳ್ಳಿ ವೀರಣ್ಣ ಧ್ವಜಾರೋಹಣ ನೆರವೇರಿಸಿದರು. ಉಪಾಧ್ಯಕ್ಷ ಎ.ಬಿ. ಚಂದ್ರಶೇಖರ್, ಕಾರ್ಯದರ್ಶಿ ರವಿಶಂಕರ್ ಪಲ್ಲಾಗಟ್ಟಿ, ಸಹ ಕಾರ್ಯದರ್ಶಿ ಎಸ್.ಜಿ. ಉಳುವಯ್ಯ, ಕೋಶಾಧ್ಯಕ್ಷ ಹೆಚ್.ಸಿ. ಲಿಂಗರಾಜ್ ವಾಲಿ, ಆಡಳಿತ ಮಂಡಳಿ ನಿರ್ದೇಶಕರುಗಳಾದ ಬೆಳ್ಳೂಡಿ ಸದಾನಂದ, ಹೆಚ್.ವಿ. ರುದ್ರೇಶ್, ಅಭಿಷೇಕ್ ಬೇತೂರು, ಮಲ್ಲಿಕಾರ್ಜುನ ಬಾದಾಮಿ, ಎಸ್.ಕೆ. ತಿಮ್ಮರಾಜ ಗುಪ್ತ, ಎಸ್.ಕೆ. ಪ್ರಶಾಂತ್ ಗುಪ್ತ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಮೊಬೈಲ್ ದರ ಹೆಚ್ಚಳ: ಟ್ವಿಟ್ಟರ್ ಸ್ಟಾರ್ಮ್ ಚಳವಳಿ

ದಾವಣಗೆರೆ, ಜ.26- ಮೊಬೈಲ್ ಪ್ರೀಪೇಯ್ಡ್ ದರಗಳ ತೀವ್ರ ಹೆಚ್ಚಳವನ್ನು ವಿರೋಧಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್, ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ವತಿಯಿಂದ ರಾಷ್ಟ್ರವ್ಯಾಪಿ ಟ್ವಿಟ್ಟರ್ ಸ್ಟಾರ್ಮ್ ಚಳವಳಿ ನಡೆಸಲಾಯಿತು.

ಖಾಸಗಿ ಟೆಲಿಕಾಂ ಕಂಪನಿಗಳು ಪ್ರಿಪೇಯ್ಡ್ ಇಂಟರ್ನೆಟ್ ಪ್ಯಾಕ್ ಮತ್ತು ಮೊಬೈಲ್ ರೀಚಾರ್ಜ್ ದರಗಳಲ್ಲಿ ಏರಿಸಿರುವ ಭಾರೀ ಹೆಚ್ಚಳದ ವಿರುದ್ಧ ಹಮ್ಮಿಕೊಂಡಿದ್ದ ಈ ಚಳವಳಿಯಲ್ಲಿ ರಾಜ್ಯಾದ್ಯಂತ 25 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿ ಯುವಜನರು, ಜನಸಾಮಾನ್ಯರು ಪಾಲ್ಗೊಂಡು ತಮ್ಮ ಪ್ರತಿರೋಧ ವ್ಯಕ್ತಪಡಿಸಿದ್ದಾರೆ.

ಲಾಕ್‌ಡೌನ್ ಸಮಯದಲ್ಲಿ ಮತ್ತು ನಂತರ ಮೊಬೈಲ್ ತಂತ್ರಜ್ಞಾನ ಮತ್ತು ಇಂಟರ್ನೆಟ್ ಸೇವೆಯ ಬಳಕೆ ಗಮನಾರ್ಹವಾಗಿ ಹೆಚ್ಚಾಗಿದೆ. ಬಹುತೇಕ ಎಲ್ಲ ತರಗತಿಗಳ



ವಿದ್ಯಾರ್ಥಿಗಳಿಗೂ ಆನ್‌ಲೈನ್ ತರಗತಿಗಳಲ್ಲಿ ಪಾಲ್ಗೊಳ್ಳಲು ಮೊಬೈಲ್ ಇಂಟರ್ನೆಟ್ ಸೇವೆ ಅಗತ್ಯವಾಗಿದೆ. ಪ್ರತಿಯೊಂದು ಕ್ಷೇತ್ರದ ಡಿಜಿಟಲೀಕರಣವು ಮೊಬೈಲ್ ಫೋನ್‌ಗಳ ಬಳಕೆಯ ಅಸಾಧಾರಣ ಹೆಚ್ಚಳಕ್ಕೆ ಕಾರಣವಾಗಿದೆ. ಇಂತಹ ಸಂದರ್ಭದಲ್ಲಿ ಖಾಸಗಿ ಟೆಲಿಕಾಂ ಕಂಪನಿಗಳು ಪ್ರಿಪೇಯ್ಡ್ ದರಗಳನ್ನು ತೀವ್ರವಾಗಿ ಹೆಚ್ಚಿಸಿದ್ದು ಜನಸಾಮಾನ್ಯರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂದು ಅಸಮಾಧಾನ ವ್ಯಕ್ತಪಡಿಸಲಾಯಿತು.

ಸಾರ್ವಜನಿಕ ವಲಯದ ಬಿಎಸ್‌ಎನ್‌ಎಲ್ ಬಲಿಕೊಟ್ಟು ಕೇವಲ ಒಂದೆರಡು ದೈತ್ಯ ಖಾಸಗಿ ಕಂಪನಿಗಳು ಟೆಲಿಕಾಂ ವಲಯದ ಮೇಲೆ ಏಕಸ್ವಾಮ್ಯ ಸಾಧಿಸುವಂತೆ ಮಾಡುವಲ್ಲಿ ಮೋದಿ ಸರ್ಕಾರವು ಅತ್ಯಂತ ಯಶಸ್ವಿಯಾಗಿದೆ. ಹೀಗಾಗಿ, ಇದು ಟೆಲಿಕಾಂ ಕ್ಷೇತ್ರದ ಸಂಪೂರ್ಣ ಖಾಸಗೀಕರಣದ ಹಾದಿಯನ್ನು ತೆರವುಗೊಳಿಸಿ ದೇಶದ ಫೋನ್ ಬಳಕೆದಾರರಿಗೆ ವಿನಾಶದ ಸಂಕೇತವನ್ನು ಸೂಚಿಸಿದೆ. ಮೊದಲಿನಿಂದಲೂ ಸರ್ಕಾರಗಳು ಖಾಸಗಿ ಟೆಲಿಕಾಂ ಕಂಪನಿಗಳತ್ತ ಒಲವು ತೋರಿವೆ ಎಂದು ಆಕ್ಷೇಪ ವ್ಯಕ್ತವಾಯಿತು.

ಎಐಡಿವೈಓ ಜಿಲ್ಲಾ ಸಮಿತಿಯ ಪರಶುರಾಮ್, ಅನಿಲ್ ಮನು, ಗುರು, ಶಶಿಕುಮಾರ್, ಅಮಿತ್, ಎಐಡಿಎಸ್‌ಓದ ಜಿಲ್ಲಾ ಕಾರ್ಯದರ್ಶಿ ಪೂಜಾ, ಕಾವ್ಯ, ಪುಷ್ಪ ಸೇರಿದಂತೆ ಇತರರು ಟ್ವಿಟ್ ಚಳವಳಿಯಲ್ಲಿ ಪಾಲ್ಗೊಂಡಿದ್ದರು.

# ಹಳೇಬಾತಿ ಗುಡ್ಡದ ಕ್ಯಾಂಪಿನ ವೃತ್ತಕ್ಕೆ ಅಪ್ಪು ಹೆಸರು



ದಾವಣಗೆರೆ, ಜ.26 - ಹಳೇಬಾತಿಯ ಗುಡ್ಡದ ಕ್ಯಾಂಪಿನಲ್ಲಿರುವ ದರ್ಗಾದ ಬಳಿಯ ವೃತ್ತಕ್ಕೆ ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಅಪ್ಪು ಸರ್ಕಲ್ ಎಂದು ನಾಮಕರಣ ಮಾಡಲಾಯಿತು. ಹಳೇಬಾತಿಯ ಅಪ್ಪು ಅಭಿಮಾನಿಗಳ ಬಳಗದಿಂದ ನಡೆದ ಕಾರ್ಯಕ್ರಮದಲ್ಲಿ ಸ್ಥಳೀಯ ಗ್ರಾ.ಪಂ. ಅಧ್ಯಕ್ಷ ಎಸ್.ಆರ್.ಸಿದ್ದೇಶ್, ಸದಸ್ಯರಾದ ಪ್ರಭು, ಕೆಂಚಪ್ಪ, ಸ್ವೆಲ್ಲಾ ಕುಮಾರಿ, ಪರಸಪ್ಪ ಮತ್ತು ಕರ್ನಾಟಕ ಯುವಶಕ್ತಿ ವೇದಿಕೆ ಜಿಲ್ಲಾಧ್ಯಕ್ಷ ಎಸ್.ಎಚ್.ರವಿಕುಮಾರ್ ಮತ್ತು ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿಮಿತ್ತ ಯುವಕರಿಂದ ರಕ್ತದಾನ ಶಿಬಿರ ಮತ್ತು ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

# ಚಿತ್ರಣ ಬದಲಿಸುವ ಕಾಮಗಾರಿ

**(1ನೇ ಪುಟದಿಂದ)** ಕುರಿತು ಸಚಿವರು ವಿವರವಾಗಿ ತಿಳಿಸಿದರು. ಕೊರೊನಾ ಮಹಾಮಾರಿ ನಮ್ಮ ಮುಂದೆ ಹಲವು ಸವಾಲುಗಳನ್ನು ತಂದೊಡ್ಡಿದ್ದರೂ, ಲಸಿಕೆ ಹಾಗೂ ವೈದ್ಯಕೀಯ ವ್ಯವಸ್ಥೆಯ ಅಭಿವೃದ್ಧಿ ಮೂಲಕ ಅವುಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲಾಗಿದೆ. ಬೊಮ್ಮಾಯಿ ಹಾಗೂ ಕೇಂದ್ರದ ನರೇಂದ್ರ ಮೋದಿ ಸರ್ಕಾರಗಳು ಅಭಿವೃದ್ಧಿ ಪೂರಕ ಕೆಲಸಗಳಿಗೆ ಹೆಚ್ಚಿನ ಒತ್ತು ನೀಡುತ್ತಿವೆ. ಜಿಲ್ಲೆಯ ಸಮಗ್ರ ಅಭಿವೃದ್ಧಿಯೇ ನಮ್ಮ ಧ್ಯೇಯವಾಗಿದೆ ಎಂದು ಸಚಿವ ಬಸವರಾಜ ಹೇಳಿದರು.

ಸಂವಿಧಾನದ ಮೂಲಕ ಎಲ್ಲ ಪೌರರಿಗೆ ಮೂಲಭೂತ ಹಕ್ಕುಗಳನ್ನು ನೀಡಲಾಗಿದೆ ಎಂದ ಅವರು, ಸ್ವಾತಂತ್ರ್ಯ ಗಳಿಸಿದ ಏಳು ದಶಕಗಳಲ್ಲಿ ಕೃಷಿ, ವಿಜ್ಞಾನ, ತಂತ್ರಜ್ಞಾನ, ಕೈಗಾರಿಕೆ, ಬಾಹ್ಯಾಕಾಶ, ರಕ್ಷಣೆ, ವಾಣಿಜ್ಯ, ವ್ಯಾಪಾರ, ಶಿಕ್ಷಣ, ಮೂಲಭೂತ ಸೌಕರ್ಯ ಅಭಿವೃದ್ಧಿ ವಲಯಗಳಲ್ಲಿ ಮಾಡಿರುವ ಕೆಲಸ ಮತ್ತು ಬಡತನ ನಿವಾರಿಸುವಲ್ಲಿನ ಸಾಧನೆ ಶ್ಲಾಘನೀಯ ಎಂದರು.

ಇದಕ್ಕೂ ಮುಂಚೆ ನಡೆದ ಪಥ ಸಂಚಲನದಲ್ಲಿ ಆರು ತಂಡಗಳು ಭಾಗವಹಿಸಿದ್ದವು. ಡಿಎಆರ್‌ನ ಆರ್‌ಪಿಐ ಎಸ್.ಎನ್. ಕಿರಣ್ ಕುಮಾರ್ ಅವರು ಕನ್ನಡದಲ್ಲಿ ಪಥ ಸಂಚಲನದ ನಿರ್ದೇಶನ ನೀಡಿದರು.

ಶರಣಪ್ಪ ಬಸಪ್ಪ ನೇತೃತ್ವದ ಸಶಸ್ತ್ರ ಮೀಸಲು ಪಡೆ, ಕಾಂತರಾಜ್ ನೇತೃತ್ವದ ನಗರ ಉಪವಿಭಾಗ, ಕೆ.ಎಸ್. ಅಣ್ಣಿಗೇರಿ ನೇತೃತ್ವದ ಗ್ರಾಮಾಂತರ ಪೊಲೀಸ್ ತಂಡ, ಹಾಲೇಶ್ ನೇತೃತ್ವದ ಗೃಹರಕ್ಷಕ ದಳ, ಅವಿನಾಶ್ ನೇತೃತ್ವದ ಅಗ್ನಿಶಾಮಕ ದಳ ಹಾಗೂ ಅಂಜನಪ್ಪ ನೇತೃತ್ವದ ಅರಣ್ಯ ರಕ್ಷಕ ದಳಗಳು ಪಥಸಂಚಲನದಲ್ಲಿ ಭಾಗವಹಿಸಿದ್ದವು. ಡಿ.ಎ.ಆರ್.ನ ಹೊನ್ನೂರಪ್ಪ ನೇತೃತ್ವದಲ್ಲಿ ಪೊಲೀಸ್ ಬ್ಯಾಂಡ್ ನುಡಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವರು ತೆರೆದ ಜೀಪಿನಲ್ಲಿ ಗೌರವ ವಂದನೆ ಸ್ವೀಕರಿಸಿದರು.

ಸಮಾರಂಭದಲ್ಲಿ ಶಾಸಕ ಎಸ್.ಎ. ರವೀಂದ್ರಾಥ್, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಸಿಇಒ ಡಾ. ವಿಜಯ ಮಹಾಂತೇಶ್, ಎಸ್‌ಪಿ ಸಿ.ಬಿ. ರಿಷ್ಯಂತ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

# ಆವರಗೊಳ್ಳದಲ್ಲಿ ಡಿಜಿಟಲ್ ಗ್ರಂಥಾಲಯ



ದಾವಣಗೆರೆ, ಜ.26 - ಗಣರಾಜ್ಯೋತ್ಸವದ ಅಂಗವಾಗಿ ಆವರಗೊಳ್ಳ ಗ್ರಾಮ ಪಂಚಾಯಿತಿಯಲ್ಲಿ ಡಿಜಿಟಲ್ ಗ್ರಂಥಾಲಯದ ಉದ್ಘಾಟನೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷ ಜಿ.ಟಿ. ವೀರಣ್ಣ ನೆರವೇರಿಸಿದರು. ಗ್ರಾ ಪಂ. ಉಪಾಧ್ಯಕ್ಷರು, ಸರ್ವ ಸದಸ್ಯರು, ಗ್ರಾಮದ ಹಿರಿಯ ಮುಖಂಡರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಜರಿದ್ದರು.

# ನಾಯಕ ವಿದ್ಯಾರ್ಥಿ ನಿಲಯದಲ್ಲಿ ಗಣರಾಜ್ಯೋತ್ಸವ



ದಾವಣಗೆರೆ, ಜ.26 - ನಗರದ ನಾಯಕ ವಿದ್ಯಾರ್ಥಿ ನಿಲಯದಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ನಿವೃತ್ತ ಪೊಲೀಸ್ ಅಧಿಕಾರಿ ಪಿ.ಆರ್. ಶಾಹು ಧ್ವಜಾರೋಹಣ ನೆರವೇರಿಸಿದರು. ಪ್ರಾಧ್ಯಾಪಕ ಪ್ರೊ. ಎ.ಬಿ. ರಾಮಚಂದ್ರಪ್ಪ ಪ್ರಾಸ್ತಾವಿಕ ಮಾತನಾಡಿದರು. ಈ ಸಂದರ್ಭದಲ್ಲಿ ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಬಿ.ವೀರಣ್ಣ, ಮುಖಂಡರುಗಳಾದ ಆಂಜನೇಯ ಗುರೂಜಿ, ವಿನಾಯಕ ಪೈಲ್ವಾನ್, ಶ್ರೀನಿವಾಸ ದಾಸಕರಿಯಪ್ಪ, ನಾಗರಾಜ್, ಶ್ಯಾಗಲೆ ಮಂಜಣ್ಣ ಮುಂತಾದವರು ಉಪಸ್ಥಿತರಿದ್ದರು.

# ಸೈನಿಕ ಶಕ್ತಿ, ಸಾಂಸ್ಕೃತಿಕ ಪರಂಪರೆ ಪ್ರದರ್ಶನ

**(1ನೇ ಪುಟದಿಂದ)** ಸಾಂಪ್ರದಾಯಿಕ ಟೋಪಿ, ಹಾಗೂ ಮಣಿಪುರದ ಶಾಲು ಧರಿಸಿದ್ದರು.

ಈ ವರ್ಷ ವಿದೇಶಿ ಅತಿಥಿ ಸಮಾರಂಭದಲ್ಲಿ ಪಾಲ್ಗೊಂಡಿರಲಿಲ್ಲ. ಸ್ವಚ್ಛತಾ ಕಾರ್ಮಿಕರು, ಮುಂಚೂಣಿ ಕಾರ್ಯಕರ್ತರು, ಆಟೋ ರಿಕ್ಷಾ ಚಾಲಕರು, ಕಟ್ಟಡ ನಿರ್ಮಾಣಕಾರರು ಹಾಗೂ ಕಾರ್ಮಿಕರು ಸ್ತಬ್ಧಚಿತ್ರಗಳನ್ನು ರೂಪಿಸಿದ ಕಾರ್ಮಿಕರು ವಿಶೇಷ ಆಹ್ವಾನಿತರಾಗಿ ಪಾಲ್ಗೊಂಡಿದ್ದರು.

ಸಮಾರಂಭ ಸ್ಪಷ್ಟವಾಗಿ ಕಾಣಲೆಂದು, ಸಾಮಾನ್ಯಕ್ಕಿಂತ ಅರ್ಧ ಗಂಟೆ ತಡವಾಗಿ ಬೆಳಿಗ್ಗೆ 10.30ಕ್ಕೆ ಗಣರಾಜ್ಯೋತ್ಸವದ ಪರೇಡ್ ಆರಂಭಿಸಲಾಯಿತು. ಈ ಸಂದರ್ಭದಲ್ಲಿ ಹಲವು ರಾಜ್ಯಗಳು ಹಾಗೂ ಕೇಂದ್ರ ಸರ್ಕಾರದ ಸಚಿವಾಲಯಗಳು ರೂಪಿಸಿದ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸಲಾಯಿತು.

ಕೊರೊನಾ ಹಿನ್ನೆಲೆಯಲ್ಲಿ ಎಂದಿನಂತೆ ಲಕ್ಷಕ್ಕೂ ಹೆಚ್ಚು ಜನರ ಬದಲು, ಈ ಬಾರಿ ಕೇವಲ 5 ಸಾವಿರ ಜನ ಸಮಾರಂಭದಲ್ಲಿ ಭಾಗವಹಿಸಲು ಅನುಮತಿ ನೀಡಲಾಗಿತ್ತು.

# ಕಸ ಸಂಗ್ರಹಿಸುವ ಗಾಡಿಗೆ ಚಾಲನೆ



ದಾವಣಗೆರೆ, ಜ.26- ಮಹಾನಗರ ಪಾಲಿಕೆಯ 11ನೇ ವಾರ್ಡ್‌ನ ಸನ್‌ಶೈನ್ ನ್ಯಾಷನಲ್ ಸ್ಕೂಲ್‌ನಲ್ಲಿ 73ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಇದೇ ವೇಳೆ ಕಸ ಸಂಗ್ರಹಿಸಲು ಹೊಸ ಗಾಡಿಗೆ ವಾರ್ಡ್‌ನ ಜನಸಂಪರ್ಕ ಕಚೇರಿಯ ಹತ್ತಿರ ಚಾಲನೆ ನೀಡಲಾಯಿತು.

# ನಗರದಲ್ಲಿ ಇಂದಿನಿಂದ ಕ್ರಿಕೆಟ್ ಟೂರ್ನಿ

ಶ್ರೀ ದುರ್ಗಾಂಬಿಕ ಫ್ರೆಂಡ್ಸ್ ಗ್ರೂಪ್ ಇವರ ಆಶ್ರಯದಲ್ಲಿ ಇಂದು ಮತ್ತು ನಾಳೆ ಪ್ರಥಮ ಬಾರಿಗೆ ಟೆನ್ನಿಸ್ ಬಾಲ್ ಮಿನಿ ಕ್ರಿಕೆಟ್ ಟೂರ್ನಿಮೆಂಟ್ ದೇವರಾಜ ಅರಸು ಬಡಾವಣೆಯ ಈಜು ಕೊಳದ ಬಳಿಯ ಮೈದಾನದಲ್ಲಿ ನಡೆಯಲಿದೆ ಎಂದು ಪ್ರಶಾಂತ್ (9113044780), ಜೆ.ವಿ. ಸಂತೋಷ್ (6363204316), ಆರ್. ಚೇತನ್ (8105149669), ಡಿ.ವಿ. ವಿನಾಯಕ (9148675186) ತಿಳಿಸಿದ್ದಾರೆ.

# ನಗರದಲ್ಲಿ ಇಂದು ಪುರಾಣ ಪ್ರವಚನ ಮಂಗಲೋತ್ಸವ



ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದ ಆವರಣದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಡೆಯುತ್ತಿದ್ದ ಒಂದು ತಿಂಗಳ ಪರ್ಯಂತದ ಮುಗುಳ ಖೋಡದ ಶ್ರೀ ಯಲ್ಲಾಲಿಂಗೇಶ್ವರ ಘನ ಲೀಲಾಮೃತ ಪುರಾಣ ಪ್ರವಚನದ ಮಹಾ ಮಂಗಲೋತ್ಸವ ಕಾರ್ಯಕ್ರಮವು ಇಂದು ಜರುಗಲಿದೆ.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಕಲಬುರ್ಗಿ ಜಿಲ್ಲೆಯ ಆಳಂದದ ಶ್ರೀ ಶಿವಲಿಂಗೇಶ್ವರ ವಿರಕ್ತ ಮಠದ ಶ್ರೀ ಅಭಿನವ ಶಿವಲಿಂಗ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಡಾ. ಶ್ರೀ ಕಲ್ಲಯ್ಯ ಅಜ್ಜನವರು ಕಾರ್ಯಕ್ರಮದ ನೇತೃತ್ವ ವಹಿಸುವರು.

ರಮೇಶ್ ಜಾಗಿರ್‌ದಾರ್, ಬಡದಾಳ್ ನಾಗರಾಜ್, ಇ.ಎಂ. ಮಂಜುನಾಥ, ವೀರಪ್ಪ ಎಂ. ಬಾವಿ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.ಪ್ರವಚನ ಪ್ರವೀಣ ಶ್ರೀ ತೋಟೇಂದ್ರ ಶಾಸ್ತ್ರಿಗಳು (ಅಬ್ಬೆ - ತುಮಕೂರು) ಈ ಪ್ರವಚನವನ್ನು ನಡೆಸಿಕೊಡುತ್ತಿದ್ದರು ಎಂದು ಕಾರ್ಯಕ್ರಮದ ಸಂಚಾಲಕರುಗಳಾದ ಅಜ್ಜಂಪುರ ಶೆಟ್ರು ಮೃತ್ಯುಂಜಯ, ರುದ್ರೇಶ್ ಯತ್ನಳ್ಳಿ, ಜೆ.ಕೆ. ಕರಿಬಸಪ್ಪ, ಡಿ.ಎಸ್. ಪಂಚಾಕ್ಷರಿ, ಸಿ.ಕೆ. ಬಸವರಾಜಪ್ಪ, ಬೆಂಗಳೂರು ಶಿವರಾಜ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಕೋಳಿ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಪಶು ಆಸ್ಪತ್ರೆ ಅವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕಿಯ ತರಬೇತಿ ಕೇಂದ್ರದಲ್ಲಿ ಕೋಳಿ ಸಾಕಾಣಿಕೆ ತರಬೇತಿಯು ಇಂದು ನಡೆಯಲಿದೆ. ವಿವರಕ್ಕೆ ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರ, ದಾವಣಗೆರೆ ಹಾಗೂ ದೂರವಾಣಿ ಸಂಖ್ಯೆ 08192-233787 ಕ್ಕೆ ಸಂಪರ್ಕಿಸಬಹುದು.

# ಜೆಜೆಎಂ ಕಾಲೇಜಿನಲ್ಲಿ ಗಣರಾಜ್ಯೋತ್ಸವ




ದಾವಣಗೆರೆ, ಜ.26 - ನಗರದ ಜ.ಜ.ಮು ವೈದ್ಯಕೀಯ ಕಾಲೇಜಿನಲ್ಲಿ 73ನೇ ಗಣರಾಜ್ಯೋತ್ಸವ ದಿನ ಆಚರಿಸಲಾಯಿತು. ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯ ಡಾ. ರವೀಂದ್ರ ಬಣಕಾರ್ ಧ್ವಜಾರೋಹಣ ನೆರವೇರಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್, ಡಾ. ಎಂ.ಜಿ ರಾಜಶೇಖರಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ನಗರದಿಂದ ಹೈದರಾಬಾದ್‌ಗೆ ದುರ್ಗಾಂಬ ಬಸ್

ದಾವಣಗೆರೆ,ಜ.26- ದಾವಣಗೆರೆ ಶ್ರೀ ದುರ್ಗಾಂಬಾ ಟ್ರಾವೆಲ್ಸ್ ವತಿಯಿಂದ ದಾವಣಗೆರೆಯಿಂದ ಹೈದರಾಬಾದ್ ನಡುವೆ ಬಸ್ ಆರಂಭಿಸಲಾಗಿದೆ.

ದಾವಣಗೆರೆಯಿಂದ ಹೊಸಪೇಟೆ, ಗಂಗಾವತಿ, ಸಿಂಧನೂರು, ಮಾನ್ವಿ, ರಾಯಚೂರು, ಶಕ್ತಿ ನಗರ, ಮೆಹಬೂಬ್ ನಗರ, ಶಂಷಾಬಾದ್ ಮೂಲಕ ಬಸ್ ಹೈದರಾಬಾದ್ ತಲುಪಲಿದೆ.

ಈ ಬಸ್‌ಗೆ ಈಗಾಗಲೇ ಬುಕ್ಕಿಂಗ್ ಆರಂಭವಾಗಿದೆ ಎಂದು ಸಂಸ್ಥೆಯ ಎಸ್. ಉಮೇಶ್ ರಾವ್ ಸಾಳಂಕಿ (94484-15595, 232262) ತಿಳಿಸಿದ್ದಾರೆ.

# ತಾತ್ಕಾಲಿಕ, ಅಭಿವೃದ್ಧಿಯೇ ಗುರಿ

**(1ನೇ ಪುಟದಿಂದ)** ಎಂದರು. ಕೆರೆ ತುಂಬಿಸುವ ಯೋಜನೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಯಿಂದ ವಿಧಾನಸಭಾ ಕ್ಷೇತ್ರ ಹಸಿರುಮಯವಾಗಲಿದ್ದು, ರೈತರ ಬದುಕು ಹಸನಾಗಲಿದೆ. ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ ಎಂದು ಆಶಯ ವ್ಯಕ್ತಪಡಿಸಿದರು. ಬಸವ ಮತ್ತು ಅಂಬೇಡ್ಕರ್ ವಸತಿ ಯೋಜನೆಯಡಿ 860 ಮನೆಗಳು ಮಂಜೂರಾಗಿವೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಜಾನಪದ ಅಕಾಡೆಮಿ ಪ್ರಶಸ್ತಿ ಪಡೆದ ಸಿದ್ದಮ್ಮನಹಳ್ಳಿ ಶ್ರೀಮತಿ ಗಂಗಮ್ಮ ಅವರಿಗೆ ಮತ್ತು ಮಣಿಪಾಲ್ ಎನಪೋಯಾ ಕಾಲೇಜು, ಆಸ್ಪತ್ರೆಯ ಹಿರಿಯ ವೈದ್ಯ ಇಬ್ರಾಹಿಂ ನಾಗನೂರು ಅವರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ತಹಶೀಲ್ದಾರ್ ಜಿ. ಸಂತೋಷ್ ಕುಮಾರ್ ಧ್ವಜಾರೋಹಣ ನೆರವೇರಿಸಿ, ಸಂದೇಶ ನೀಡಿದರು. ವೇದಿಕೆಯಲ್ಲಿ ಪ.ಪಂ. ಅಧ್ಯಕ್ಷ ಎಸ್. ಸಿದ್ದಪ್ಪ, ಉಪಾಧ್ಯಕ್ಷೆ ಶ್ರೀಮತಿ ಮಂಜಮ್ಮ, ಎಪಿಎಂಸಿ ಅಧ್ಯಕ್ಷ ರೇಣುಕಾನಂದ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆ.ಬಿ. ಸಿದ್ದೇಶ್, ಕಾರ್ಯ ನಿರ್ವಾಹಕ ಅಧಿಕಾರಿ ಬಿ. ಲಕ್ಷ್ಮಿಪತಿ, ಬಿಇಓ ಉಮಾ ದೇವಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ ಮತ್ತು ಇತರರು ಉಪಸ್ಥಿತರಿದ್ದರು.

# ಮೂಲಮಂತ್ರವಾದಾಗ ಸಮ ಸಮಾಜ ನಿರ್ಮಾಣ ಸಾಧ್ಯ

**(1ನೇ ಪುಟದಿಂದ)** ಹೀಗಾಗಿ, ಎಲ್ಲಾ ಹಬ್ಬ - ಹರಿದಿನಗಳನ್ನು ಸರಳವಾಗಿ ಆಚರಿಸುವ ಮೂಲಕ ಸಾಂಕ್ರಾಮಿಕ ಪಿಡುಗನ್ನು ತೊಲಗಿಸಬೇಕು. ಕೋವಿಡ್-19 ಸಾಂಕ್ರಾಮಿಕ ರೂಪಾಂತರಿ ಓಮಿಕ್ರಾನ್ ವೈರಸ್‌ನ ಮೂರನೇ ಅಲೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ.

ತಾಲ್ಲೂಕು ಆಡಳಿತವೂ ಸಹ ಈ ನಿಟ್ಟಿನಲ್ಲಿ ವ್ಯವಸ್ಥಿತವಾದ ಮುನ್ನೆಚ್ಚರಿಕೆಯೊಂದಿಗೆ ಸದಾ ಸನ್ನದ್ಧವಾಗಿದೆ. ಆಸ್ಪತ್ರೆಗಳಲ್ಲಿ ಆಮ್ಲಜನಕ ಹಾಗೂ ಔಷಧಿ ಸೇರಿದಂತೆ ಅಗತ್ಯ ವೈದ್ಯಕೀಯ ಸೌಲಭ್ಯಗಳ ಕೊರತೆ ಉಂಟಾಗದಂತೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ತಾಲ್ಲೂಕಿನಾದ್ಯಂತ ಈಗಾಗಲೇ ಮೊದಲ ಹಂತದಲ್ಲಿ ಶೇ. 98ರಷ್ಟು ಹಾಗೂ ಎರಡನೇ ಹಂತದಲ್ಲಿ ಶೇ. 78ರಷ್ಟು ಲಸಿಕೆಯನ್ನು ಹಾಕಲಾಗಿದೆ. ಎರಡನೇ ಹಂತದಲ್ಲಿನ ಬಾಕಿ ಉಳಿದ ಶೇ.22ರಷ್ಟು ಕಡ್ಡಾಯವಾಗಿ ಲಸಿಕೆಯನ್ನು ಪಡೆಯಬೇಕು ಎಂದು ಅವರು ಮನವಿ ಮಾಡಿದರು.

ಪುರಸಭೆ ಅಧ್ಯಕ್ಷ ಮಂಜುನಾಥ್ ಇಜಂತಕರ್ ಮಾತನಾಡಿ, ಸಂವಿಧಾನ ಆಶಯದ ಹಿನ್ನೆಲೆಯಲ್ಲಿ ನಾವು ಇಂತಹ ಹುದ್ದೆಗಳನ್ನು ಅಲಂಕರಿಸುತ್ತಿದ್ದೇವೆ.ನಮ್ಮ ಹಿರಿಯರ ಸ್ವಾತಂತ್ರ್ಯ ಹೋರಾಟದ ನೆನಪುಗಳನ್ನು ಸ್ಮರಿಸುತ್ತಾ, ನಮ್ಮ ಮೂಲಭೂತ ಹಕ್ಕುಗಳು, ಕರ್ತವ್ಯಗಳನ್ನು ಅಳವಡಿಸಿಕೊಂಡು ಸರ್ಕಾರದ ಸೌಲಭ್ಯಗಳನ್ನು ಪಡೆಯಿರಿ ಎಂದರು.

ತಹಶೀಲ್ದಾರ್ ಎಂ.ಎಲ್.ನಂದೀಶ್, ಡಿವೈಎಸ್‌ಪಿ ವಿ. ಹಾಲಮೂರ್ತಿರಾವ್, ಸಿಪಿಐ ನಾಗರಾಜ ಕಮ್ಮಾರ, ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜ್, ತಾಪಂ ಇಓ ಕೆ.ಆರ್. ಪ್ರಕಾಶ್, ಮುಖ್ಯಾಧಿಕಾರಿ ಶಿವಕುಮಾರ್ ಎರಗುಡಿ, ಬಿಸಿಎಂ ವಿಸ್ತರಣಾಧಿಕಾರಿ ಭೀಮಪ್ಪ ಕೊಳಚಿ, ಪುರಸಭೆ ಉಪಾಧ್ಯಕ್ಷೆ ನಿಟ್ಟೂರು ಭೀಮವ್ವ ಸಣ್ಣಹಾಲಪ್ಪ, ಸದಸ್ಯರಾದ ಜಾಕೀರ್ ಹುಸೇನ್, ಕಿರಣ್ ಶ್ಯಾನಭೋಗ, ಜಾವೀದ್, ಭರತೇಶ್ ಜೋಗಿನರ್, ತಾರಾ ಹನುಮಂತಪ್ಪ, ಇ.ಸಿ.ಓ ಮಂಜುನಾಥ ಗಿರಜ್ಜಿ, ಉಪ ತಹಶೀಲ್ದಾರ್ ಚಂದ್ರಶೇಖರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



## ಎ.ಜಿ.ಬಿ. ಕಾಲೇಜಿಗೆ ಎರಡು ರ್‍ಯಾಂಕ್





ದಾವಣಗೆರೆ, ಜ.26- ದಾವಣಗೆರೆ ವಿವಿ ನಡೆಸಿದ ಸ್ನಾತಕ ಬಿ.ಕಾಂ. ಪದವಿ ಪರೀಕ್ಷೆಯಲ್ಲಿ ನಗರದ ಎ.ಜಿ.ಬಿ. ಕಾಲೇಜಿನ ವಿದ್ಯಾರ್ಥಿಗಳಾದ ಎಂ.ಕೆ. ಮಧು (ಶೇ. 89.5) 7ನೇ ರ್‍ಯಾಂಕ್, ಶಶಾಂಕ್ ಪಾಲನಕರ್ ಎಂ. (ಶೇ. 89.4) 8ನೇ ರ್‍ಯಾಂಕ್ ಪಡೆದಿದ್ದಾರೆ.

## ಬಿ.ಎನ್. ರಚನಾಗೆ ದ್ವಿತೀಯ ಸ್ಥಾನ



ದಾವಣಗೆರೆ, ಜ.26- ರಾಷ್ಟ್ರೀಯ ಮತದಾರರ ದಿನಾಚರಣೆ ಪ್ರಯುಕ್ತ ಏರ್ಪಡಿಸಿದ್ದ ರಾಜ್ಯಮಟ್ಟದ ಸ್ಪರ್ಧಾತ್ಮಕ ಚಟುವಟಿಕೆಯಾದ ಕೊಲ್ಯಾಜ್ ಮೇಕಿಂಗ್ ಸ್ಪರ್ಧೆಯಲ್ಲಿ ನಗರದ ಎಂ.ಎಂ. ಶಿಕ್ಷಣ ಮಹಾವಿದ್ಯಾ ಲಯದ ಬಿ.ಎನ್. ರಚನಾ ದ್ವಿತೀಯ ಸ್ಥಾನ ಗಳಿಸಿದ್ದಾರೆ.

## ನಗರದಲ್ಲಿಂದು ವಿದ್ಯುತ್ ವ್ಯತ್ಯಯ

ಎಮ್‌ಬಿ ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ ಹಾಗೂ ಇತರೆ ಪ್ರದೇಶಗಳು. ಶೇಖರಪ್ಪ ನಗರ ಮಸೀದಿ ಹಿಂಭಾಗ, ರಂಭಾಪುರಿ ರಸ್ತೆ, ಮಹಾವೀರ ಭವನ, ಆರ್‌ಎಮ್‌ಸಿ ಲಿಂಕ್ ರಸ್ತೆ, ಗುಜರಿ ಲೈನ್, ಬಂಬೂ ಬಜಾರ್, ಬಿ.ಟಿ. ಲೇಔಟ್, ಎಲ್‌ಬಿಎಸ್ ನಗರ, ಆನೆಕೊಂಡ, ಇಮಾಂನಗರ, ಬಿಡಿಓ ಆಫೀಸ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ದುಗ್ಗಮ್ಮನ ಜಾತ್ರೆ : ಇಂದು ಸಭೆ

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಯ ಜಾತ್ರೆ ಹಿನ್ನೆಲೆಯಲ್ಲಿ ಇಂದು ಮಧ್ಯಾಹ್ನ 12.30ಕ್ಕೆ ದುರ್ಗಾಂಬಿಕಾ ಪ್ರಸಾದ ನಿಲಯದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ. ಟ್ರಸ್ಟ್‌ನ ಗೌರವ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಧರ್ಮದರ್ಶಿ ಗೌಡ್ರು ಚನ್ನಬಸಪ್ಪ ತಿಳಿಸಿದ್ದಾರೆ.

## ರೈಲ್ವೆ ಪರೀಕ್ಷೆ : ರೈಲಿಗೆ ಕಲ್ಲು ತೂರಾಟ

ನವದೆಹಲಿ, ಜ. 26 – ರೈಲ್ವೆ ನೇಮಕಾತಿ ಪರೀಕ್ಷೆಯಲ್ಲಿ ಅವ್ಯವಹಾರಗಳು ನಡೆದಿವೆ ಎಂದು ಬಿಹಾರದಲ್ಲಿ ಪ್ರತಿಭಟನೆ ನಡೆಸುತ್ತಿರುವ ಅಭ್ಯರ್ಥಿಗಳು, ಬಿಹಾರದ ಗಯಾದಲ್ಲಿ ರೈಲೊಂದಕ್ಕೆ ಬೆಂಕಿ ಹಚ್ಚಿದ್ದಾರೆ. ಬಭುವಾ - ಪಾಟ್ನಾ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ರೈಲಿಗೆ ಮೊದಲು ಕಲ್ಲು ತೂರಿದ ಪ್ರತಿಭಟನಾಕಾರರು, ನಂತರ ಬೆಂಕಿ ಹಚ್ಚಿದ್ದಾರೆ. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ. ಉತ್ತರ ಪ್ರದೇಶದಲ್ಲೂ ಸಹ ಅಭ್ಯರ್ಥಿಗಳು ಪ್ರತಿಭಟನೆ ನಡೆಸಿದ್ದಾರೆ.

## ರೈಲ್ವೆ ನೇಮಕಾತಿ ಟೆಸ್ಟ್‌ಗಳ ಫಲಿತಾಂಶ ರದ್ದು

ನವದೆಹಲಿ, ಜ. 26 – ಉದ್ಯೋಗಾಕಾಂಕ್ಷಿಗಳು ಹಿಂಸಾತ್ಮಕ ಪ್ರತಿಭಟನೆ ನಡೆಸಿದ ನಂತರ ಎನ್.ಟಿ.ಪಿ.ಸಿ. ಹಾಗೂ 1ನೇ ಹಂತದ ಟೆಸ್ಟ್‌ಗಳ ಫಲಿತಾಂಶವನ್ನು ರೈಲ್ವೆ ರದ್ದುಗೊಳಿಸಿದೆ. ದೂರುಗಳನ್ನು ಆಲಿಸಲು ಉನ್ನತ ಹಂತದ ಸಮಿತಿಯೊಂದನ್ನು ರಚಿಸಲಾಗಿದೆ. ಸಮಿತಿ ರೈಲ್ವೆ ಸಚಿವಾಲಯಕ್ಕೆ ವರದಿ ಸಲ್ಲಿಸಲಿದೆ ಎಂದು ರೈಲ್ವೆ ವಕ್ತಾರರು ತಿಳಿಸಿದ್ದಾರೆ.

## ಈ ಬಾರಿಯೂ ಕೇಂದ್ರದಿಂದ 'ಹಸಿರು ಬಜೆಟ್'

ನವದೆಹಲಿ, ಜ. 26 – ಬಜೆಟ್ ಪ್ರತಿಗಳ ಮುದ್ರಣವನ್ನು ಈ ಬಾರಿಯೂ ಕಡಿತಗೊಳಿಸಿರುವ ಕೇಂದ್ರ ಹಣಕಾಸು ಸಚಿವಾಲಯ, 'ಹಸಿರು ಬಜೆಟ್'ಗೆ ಮುಂದಾಗಿದೆ. ಬಜೆಟ್ ಕಡತಗಳು ಬಹುತೇಕವಾಗಿ ಡಿಜಿಟಲ್ ಸ್ವರೂಪದಲ್ಲಿ ಲಭ್ಯವಾಗಲಿವೆ. ಕೆಲವೇ ಪ್ರತಿಗಳನ್ನು ಮಾತ್ರ ಮುದ್ರಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಹಿಂದೆ ಬಜೆಟ್ ಕಡತಗಳನ್ನು ನೂರಾರು ಪ್ರತಿಗಳಲ್ಲಿ ಮುದ್ರಿಸಲಾಗುತ್ತಿತ್ತು. ಇದಕ್ಕೆ ಸಾಕಷ್ಟು ಪ್ರಮಾಣದ ಸಿಬ್ಬಂದಿ ಅಗತ್ಯವಿರುತ್ತಿತ್ತು.


ಪ್ರಿಯ ಗ್ರಾಹಕರಿಗಾಗಿ ನೈಸರ್ಗಿಕವಾದ 'ಆರೋಹ' ಗೋಧಿ ಮತ್ತು ರಾಗಿ ಹಿಟ್ಟು

ದಿನನಿತ್ಯದ ಆಹಾರ ಉತ್ಪಾದನಾ ವ್ಯವಸ್ಥೆಯಲ್ಲಿ ಎಲ್ಲಾ ಸಾಮಗ್ರಿಗಳು ಕಲೆಬೆರಕೆಯಿಂದ ಕೂಡಿರುತ್ತವೆ... ಆದರೆ ಹರಪನಹಳ್ಳಿ ಯುವ ಉದ್ಯಮಿ ಚಂದನ್ ಟಿ.ಎಮ್. ರವರು ಜನರ ಹಿತದೃಷ್ಟಿಗಾಗಿ ಕಲುಷಿತರಹಿತ ಚಿಕ್ಕೆಯಿಂದ ತಯಾರಿಸಿದ ಹಿಟ್ಟನ್ನು ನೀಡಬೇಕೆಂಬ ಆಸೆಯಿಂದ 'ಆರೋಹ' ಎಂಬ ಹೆಸರಿನಲ್ಲಿ ಗೋಧಿ ಮತ್ತು ರಾಗಿ ಹಿಟ್ಟನ್ನು ಜನರಿಗೆ ನೀಡುವಲ್ಲಿ ಸಫಲರಾಗಿದ್ದಾರೆ. ಇವರು ತಯಾರಿಸುವ ಹಿಟ್ಟು ಶುದ್ಧ ನೈಸರ್ಗಿಕವಾಗಿದ್ದು, ಯಾವುದೇ ಮಿಶ್ರಣವಿಲ್ಲದೆ ಆರೋಗ್ಯಕ್ಕೂ ಒಳ್ಳೆಯದೆಂದು ಜನ ಇಷ್ಟ ಪಟ್ಟಿದ್ದಾರೆ. ಈಗಾಗಲೇ ದಾವಣಗೆರೆ ಮತ್ತು ಸುತ್ತಮುತ್ತಲಿನ ನಗರಗಳಲ್ಲಿ ಜನರ ನೆಚ್ಚಿನ ಆಯ್ಕೆಯಾಗಿ ಪರಿವರ್ತನೆಯಾಗುತ್ತಿದೆ.




ನಿಮ್ಮ ಆರೋಗ್ಯ ರಕ್ಷಣೆಗಾಗಿ 'ಆರೋಹ' ಹಿಟ್ಟನ್ನೇ ಬಳಸಿ ಪ್ರೋತ್ಸಾಹಿಸಿ...

ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಲ್ಲಿ ಸಂಪರ್ಕಿಸಿ :

ಪುಷ್ಪ ಫುಡ್ ಪ್ರೊಡಕ್ಟ್ಸ್, ಹರಪನಹಳ್ಳಿ.

ಫೋ. : 82961 00443, 97412 55720


## ತೃತೀಯ ವರ್ಷದ ಪುಣ್ಯಸ್ಮರಣೆ



ದಿ॥ ಶ್ರೀ ಹರಪನಹಳ್ಳಿ ರೇವಣಸಿದ್ದಪ್ಪ

ನೀವು ನಮ್ಮನ್ನಗಲಿ ಇಂದಿಗೆ
ಮೂರು ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನ
ನಮಗೆ ದಾರಿ ದೀಪ...
ಸದಾ ನಿಮ್ಮ ಸ್ಮರಣೆಯಲ್ಲಿರುವ.

ಪತ್ನಿ: ನಂಬಕ್ಕ ಮತ್ತು ಮಕ್ಕಳು
ಬಂಧು-ಮಿತ್ರರು ಹಾಗೂ ಹರಪನಹಳ್ಳಿ ವಂಶಸ್ಥರು


AKSHARA JYOTHI EDUCATION TRUST ®

**RURAL PUBLIC RESIDENTIAL SCHOOL, DIDDIGE.**

JAGALUR TALUK, DAVANAGERE DIST.

**WE ARE HIRING!!**

Teachers willing to serve in rural area for the growth of rural students with high ambition, here's a great opportunity to fulfill your dreams.

"THE TEACHERS WHO ARE WORKING IN THE COMPETITIVE ENVIRONMENT WITH ZERO TO 20 YEARS OF EXPERIENCE, CAN JOIN US TO CREATE THE BETTER WORLD"

POSITIONS AVAILABLE

| POSTS | QUALIFICATION | NUMBER OF POSTS |
|---|---|---|
| ENGLISH | D.Ed, B.A B.Ed, M.A B.Ed | 03 |
| MATHEMATICS | B.Sc B.Ed, M.Sc B.Ed | 03 |
| SCIENCE | B.Sc B.Ed, M.Sc B.Ed | 03 |

Note : • Best opportunity for fresh college outputs. • Boarding facility is available.
• Competitive salary will be offered to the right teachers.
• Teachers with required qualifications can walk in for the interview.

Place: RURAL PUBLIC SCHOOL, DIDDIGE.

Email id:aksharajyothirps@gmail.com, Contact : 99025 46021


॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ



(ಜನನ : 25.02.2000 ಮರಣ : 23.01.2022)

ಹರಿಹರ ತಾಲ್ಲೂಕು ಬೆಳ್ಳೂಡಿ ಗ್ರಾಮದ ವಾಸಿ ಶ್ರೀಮತಿ ದ್ರಾಕ್ಷಾಯಣಮ್ಮ, ಶ್ರೀ ನಂದಿಹಳ್ಳಿ ಚನ್ನಬಸಪ್ಪ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 23.01.2022ನೇ ಭಾನುವಾರ ಬೆಳಗಿನ ಜಾವ 5.45ಕ್ಕೆ ಸದರಿ ಗ್ರಾಮದ ವಾಸಿ ಶ್ರೀಮತಿ ಗಿರಿಜಮ್ಮ, ಶ್ರೀ ಶ್ರೀಧರ್ ಎನ್.ಸಿ. (ಸಿದ್ದಣ್ಣ) ಇವರ ಮಗನಾದ

**ಚಿ॥ ಶರತ್ ಎನ್.ಎಸ್.**

ಇವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಆ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಸಮಾರಾಧನೆ'ಯನ್ನು ದಿನಾಂಕ : 27.01.2022ನೇ ಗುರುವಾರ ಬೆಳಿಗ್ಗೆ 11.00 ಘಂಟೆಗೆ ಹರಿಹರ ನಗರದ ವಿದ್ಯಾನಗರ, 'ಸಿ' ಬ್ಲಾಕ್, 3ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀ ನಂದಿಹಳ್ಳಿ ಚನ್ನಬಸಪ್ಪ ಮತ್ತು ಸಹೋದರರು ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು. ಫೋ. : 98805 38791, 81529 02536




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte